# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಪ್ರಭಾವತಿ ಪರಿಣಯ

ಕವಿ

## ಅಗರಿ ಶ್ರೀನಿವಾಸ ಭಾಗವತ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನು ಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಗೊತ್ತಿಲ್ಲ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ ಪ್ರಕಟಿತ ಅಗರಿ ಶ್ರೀನಿವಾಸ ಭಾಗವತ ಸಂಸ್ಮರಣ ಪ್ರಸಂಗ ಮಾಲಿಕೆ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೨೦

**ಪಾತ್ರಗಳು:**

ದೇವೇಂದ್ರ, ದೇವತೆಗಳು, ವಜ್ರನಾಭ, ಸುನಾಭ, ಬ್ರಹ್ಮ, ರಕ್ಕಸ ಬಲಗಳು, ದೇವದೂತ, ಬೃಹಸ್ಪತಿ, ಕಾಶ್ಯಪ, ಶೂತಮುಖಿ (ಹಂಸ), ಶ್ರೀಕೃಷ್ಣ, ಶುಚಿಮುಖಿ, ಪ್ರಭಾವತಿ, ಭದ್ರ, ಮೇಳದವರು, ರಂಭೆ, ನಳಕೂಬರ, ಮನ್ಮಥ, ಚಂದ್ರವತಿ, ಗುಣವತಿ, ಗದ, ಸಾಂಬ, ರಕ್ಕಸದೂತರು

**ಕಥಾ ಸಾರಾಂಶ:**

ದೇವೆಂದ್ರನ ಒಡ್ಡೋಲಗದೊಂದಿಗೆ ಪ್ರಸಂಗ ಪ್ರಾರಂಭವಾಗುತ್ತದೆ. ವಜ್ರಪುರದ ದೊರೆ ವಜ್ರನಾಭ ಮತ್ತು ಅವನ ತಮ್ಮ ಸುನಾಭರೆಂಬ ರಾಕ್ಷಸರ ಉಪಟಳದ ಚರ್ಚೆಯಾಗುತ್ತದೆ. ಬ್ರಹ್ಮನ ಅನುಗ್ರಹ ಪಡೆದ ಈ ರಾಕ್ಷಸರಿಗೆ ಅಳಿಯನಿಂದ ಮಾತ್ರ ಸಾವು ಸಾಧ್ಯ. ಇದರಿಂದಾಗಿ ಆ ದಾನವರು ಸುರಪುರಕ್ಕೆ ದಾಳಿಮಾಡುತ್ತಾರೆ. ಭಯಂಕರವಾದ ಯುದ್ಧದಲ್ಲಿ ಗೆಲವು ಕಷ್ಟವೆಂದು ಅರಿತ ದೇವೇಂದ್ರ ಉಪಾಯವಾಗಿ ತಂದೆ ಕಾಶ್ಯಪ ಮುನಿಯಲ್ಲಿಗೆ ವಜ್ರನಾಭನೊಂದಿಗೆ ತೆರಳಿ ರಾಜಿ ಮಾಡಿಕೊಳ್ಳುತ್ತಾನೆ. ಆದರೂ ಉಪಟಳ ನಿಲ್ಲುವುದಿಲ್ಲ. ಇದಕ್ಕೆ ದ್ವಾರಕೆಗೆ ಬಂದು ಕೃಷ್ಣನ ಸಲಹೆಯನ್ನು ದೇವೇಂದ್ರ ಕೇಳುತ್ತಾನೆ. ವಜ್ರನಾಭನ ಮಗಳಾದ ಪ್ರಭಾವತಿಯನ್ನು ತನ್ನ ಮಗನಾದ ಮದನನು ಮದುವೆಯಾಗಿ ಮಾವನನ್ನು ಸಂಹರಿಸುತ್ತಾನೆ ಎಂದು ಧೈರ್ಯ ತುಂಬುತ್ತಾನೆ. ಗಾಳಿಯೂ ಕೂಡ ಒಳನುಸುಳಲು ಸಾಧ್ಯವಿಲ್ಲದ ವಜ್ರಪುರವನ್ನು ಮದನನು ಪ್ರವೇಶಿಸುವ ಉಪಾಯ ಹೇಳಿಕೊಡುತ್ತಾನೆ. ಅಂತೆಯೇ ಶೂತಮುಖಿ ಎಂಬ ಹಂಸೆಯನ್ನು ದೂತೆಯಾಗಿ  ದೇವೇಂದ್ರ ಕಳಿಸುತ್ತಾನೆ. ಜಲಕ್ರೀಡೆಗೆ ಬಂದ ಪ್ರಭಾವತಿಯನ್ನು ಸಂಪರ್ಕಿಸಿದ ಹಂಸೆ ಮಾರನ ಗುಣಗಾನ ಮಾಡುತ್ತದೆ. ಇದರಿಂದಾಗಿ ಪ್ರಭಾವತಿ ರಾಕ್ಷಸರ ಕಡೆಯವರನ್ನು ದ್ವೇಷಿಸುತ್ತಾ ಮನ್ಮಥನಿಗೆ ಮನ ಸೋಲುತ್ತಾಳೆ. ಮುಂದೆ ಭದ್ರನೆಂಬ ಭಾಗವತನ ಮೂಲಕ ದ್ವಾರಕೆಯವರ ದಶಾವತಾರ ಆಟದ ನೆಪದಲ್ಲಿ ವಜ್ರಪುರವನ್ನು ಸೇರಿಕೊಳ್ಳುತ್ತಾರೆ. ಮದನ, ಶರ, ಸಾಂಬರೆಲ್ಲ ವೇಶ ಮರೆಸಿ ವಜ್ರಪುರದಲ್ಲಿ ನೆಲಸುತ್ತಾರೆ. ಭದ್ರ ಮೇಳದವರು ನಳಕೂಟದ ವೃತ್ತಾಂತವನ್ನು ದಶಾವತಾರಸ ಆಟವಾಗಿ ಖ್ಯಾತಿ ಪಡೆಯುತ್ತಾರೆ. ಹಂಸೆಯ ಮೂಲಕ ಅಂತಃಪುರವನ್ನು ಸೇರಿದ ಮದನ ಪ್ರಭಾವತಿಯನ್ನು ಗಾಂಧರ್ವ ವಿಧಿಯಲ್ಲಿ ವಿವಾಹವಾಗುತ್ತಾರೆ. ಈ ವಿಚಾರವನ್ನು ರಕ್ಷಕರ ಮೂಲಕ ತಿಳಿದುಕೊಂಡ ವಜ್ರನಾಭ ಅಂತ:ಪುರಕ್ಕೆ ದಾಳಿ ಮಾಡುತ್ತಾನೆ. ಯುದ್ಧದಲ್ಲಿ ವಜ್ರನಾಭ ಸಾಯುತ್ತಾನೆ.

**ಕವಿ ಪರಿಚಯ: (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಅಗರಿ ಶ್ರೀನಿವಾಸ ಭಾಗವತರು ಮೂಲತಃ ಸುರತ್ಕಲ್ ಸಮೀಪದ ಹೊಸಬೆಟ್ಟಿನವರು. ಎಡಪದವು ಹತ್ತಿರದ ಅಗರಿಯಲ್ಲಿ ನೆಲೆನಿಂತವರು. ತಂದೆ ತಿಮ್ಮಪ್ಪಯ್ಯ, ತಾಯಿ ರಾಧಮ್ಮ. ದಿ ಅಗರಿ ಶ್ರೀನಿವಾಸ ಭಾಗವತರು. 1924ರ ಪೂರ್ವದಲ್ಲಿ ನಾಟಕ ರಂಗದಲ್ಲಿ ತೊಡಗಿಸಿಕೊಂಡವರಾಗಿದ್ದರು. ಸಾಹಿತ್ಯ, ಸಂಗೀತಗಳ ಮೇಲಿದ್ದ ಅಭಿಮಾನದಿಂದ ನಾಟಕ ರಂಗಗಳಲ್ಲಿ ವ್ಯವಸಾಯ ಮಾಡುತ್ತಿದ್ದರು. ದಿವಂಗತ ಪುತ್ತಿಗೆ ರಾಮಕೃಷ್ಣ ಜೋಯಿಸ ಭಾ ಗವತರ ಮೈತ್ರಿ ಅಗರಿ ಭಾಗವತರನ್ನು ಯಕ್ಷಗಾನ ಕಲೆಯತ್ತ ಸೆಳೆಯಿತು. ಮಂಗಳೂರಿನ ಶಿಕ್ಷಕ ತರಬೇತಿ ಶಾಲೆ ಹಾಗೂ ಕೆನರಾ ಹೈಸ್ಕೂಲಿನಲ್ಲಿ ವಾರಕ್ಕೊಮ್ಮೆ ನಡೆಯುತ್ತಿದ್ದ ತಾಳಮದ್ದಲೆ ಕೂಟಗಳಲ್ಲಿ ಭಾಗವಹಿಸುತ್ತಿದ್ದ ಅಜ್ಜ ಬಲಿಪರ ಭಾಗವತಿಕೆಯನ್ನು ಕೇಳಿ ಯಕ್ಷಗಾನ ಹಾಡುಗಾರಿಕೆಯ ವೈಶಿಷ್ಟ್ಯವೇನೆಂಬುದನ್ನು ಮನನ ಮಾಡಿಕೊಂಡರು. ಧರ್ಮಸ್ಥಳ, ಕಟೀಲು, ಕೂಡ್ಲು, ಸುರತ್ಕಲ್, ಸುಬ್ರಮಣ್ಯ ಮುಂತಾದ ಮೇಳಗಳಲ್ಲಿ ಭಾಗವತರಾಗಿ ತಿರುಗಾಟ ನಡೆಸಿದ್ದಾರೆ. ಯಕ್ಷಬ್ರಹ್ಮ ಎಂಬ ಅಭಿನಂದನ ಗ್ರಂಥ ಇವರಿಗೆ ಸಮರ್ಪಣೆಯಾಗಿದೆ. ಇವರು ೨೮ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಶ್ರೀ ದೇವಿ ಮಹಾತ್ಮೆ ಒಂದು ಲಕ್ಷಕ್ಕೂ ಅಧಿಕ ಭಾರಿ ಪ್ರದರ್ಶನಗೊಂಡಿದ್ದು ಯಕ್ಷಗಾನದ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ.

ಇವರು ಬರೆದ ಪ್ರಸಂಗಗಳು: ಶ್ರೀದೇವೀ ಮಹಾತ್ಮೆ, ಬ್ರಹ್ಮಕಪಾಲ, ಶಿವಲೀಲಾರ್ಪಣ, ಅಂಧಕಾಸುರ ವಧೆ, ಪ್ರಭಾವತೀ ಪರಿಣಯ, ಧನಗುಪ್ತ – ಮಹಾಬಲ, ಭಗವಾನ್ ಏಸುಕ್ರಿಸ್ತ, ಮಹಾದೇವೀಲಲಿತೋಪಾಖ್ಯಾನ, ನಾರಾಯಣ ಗುರು ಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ವೆಂಕಟೇಶ ಮಹಾತ್ಮೆ, ಭರತೇಶ ವೈಭವ, ಶ್ರೀದೇವಿಭ್ರಮರಾಂಬಿಕಾ ವಿಲಾಸ, ಭಸ್ಮಾಸುರ ಮೋಹಿನಿ, ಸುಂದೋಪಸುಂದರ ಕಾಳಗ, ಸಿರಿ ಮಹಾತ್ಮೆ, ಭಸ್ಮರುದ್ರಾಕ್ಷಿ ಮಹಾತ್ಮೆ, ಭಗವಾನ್ ಬುದ್ಧ, ಅಭಯರಾಣಿ ಅಬ್ಬಕ್ಕ, ವಿಶ್ವಾಮಿತ್ರ ಮೇನಕೆ, ಶುಕ್ರಪ್ರತಾಪ, ಜಗದ್ಗುರು ಶಂಕರಾಚಾರ್ಯ, ತಾರಾ ಶಶಾಂಕ, ಕಣ್ವಪುರ ಮಹಾತ್ಮೆ, ಹೊಂಬುಚ್ಚ ಕ್ಷೇತ್ರ ಮಹಾತ್ಮೆ, ಆಟದೊಳಗಿನ ಆಟ, ತುಳಸೀ ಜಲಂಧರ, ನರಕಾಸುರ ವಧೆ

**ಟಿಪ್ಪಣಿ:**

ಹೆಚ್ಚು ಬಳಕೆಯಲ್ಲಿ ಇಲ್ಲದ ಪ್ರಸಂಗ.

# ಪ್ರಸಂಗ ಸಾಹಿತ್ಯ

**ಭೈರವಿ - ಝಂಪೆ**
ಧರಣಿಪಾಲಕ ಕೇಳು | ಸುರಪಾಲ ನಾಕದೊಳು |
ನೆರಹಿಸುತ ಸುಮನಸರ | ಮೆರೆಯೆ ವಿಭವದೊಳು || 1 ||

ವರುಣ ವಾಯು ಕುಬೇರ | ನಿಋುತಿ ಮೊದಲಾದವರ |
ನೆರವಿಯಲಿ ನುಡಿದ ಮನ | ದಿರವನೀ ತೆರದಿ || 2 ||

ಕೇಳಿದಿರೆ ಸುಮನಸರು | ನೀಲವರ್ಣನ ದಯದಿ |
ಮೇಲು ಸುರಪದವೆಮ್ಮ | ಪಾಲಿಗಾಯ್ತೈಸೆ || 3 ||

ಆದರಾ ಖಳರು ದಾ | ಯಾದ್ಯ ಮತ್ಸರದಿಂದ |
ಬಾಧಿಸುವರೆಮ್ಮುವನು | ಹಾದಿಯೇನಿದಕೆ || 4 ||

**ಭೈರವಿ - ಅಷ್ಟ**
ಸುರಪಾಲ ಲಾಲಿಸಯ್ಯ | ದಾನವರ ಸಂ |
ಗರಕುಂಟೆ ಭಯವು ಜೀಯ ||
ದುರುಳರು ನಾಕಕ್ಕೈ | ತರಲು ಸಂಗ್ರಾಮದಿ |
ತರಿದಿಕ್ಕುವೆವು ನಿಶ್ಚಯ || 5 ||

ಸುರಧೇನು ಕಲ್ಪತರು | ಮುಂತಾಗಿಹ |
ವರ ವಸ್ತುಗಳ ಖೂಳರು ||
ಮರುಳರಂತಿಚ್ಛಿಸಿ | ಧುರಕೈದಿ ನಮ್ಮಲಿ |
ಹರಣ ನೀಗಾಡುವರು || 6 ||

ಸುಧೆಯನು ಸೇವಿಸಿರೆ | ದೈತ್ಯೇಯರ |
ಕದನಕಂಜುವ ಭಟರೆ ||
ಪದುಮನಾಭನ ದಯ | ದಲಿ ಖೂಳರನು ಯಮ |
ಸದನಕಟ್ಟದೆ ಬಿಡೆವು || 7 ||

**ಮಧ್ಯಮಾವತಿ - ಏಕ**
ಬಲು ತೋಷವಾಂತೆ ನಾ ನೀವೆಂದ ನುಡಿಗೆ |
ಕಲಿಗಳು ನಿಶ್ಚಯ ಸಂಗರದೊಳಗೆ ||
ಖಳರ ಭೀತಿಯು ನಮಗಿಳ್ಳಿನಿತಿಲ್ಲ |
ಪದುಮನಾಭನ ದಯದೊಳಗೆ ಸುಳ್ಳಲ್ಲ || 8 ||

**ಸೌರಾಷ್ಟ್ರ - ತ್ರಿವುಡೆ**
ಧಾರುಣೀಶ್ವರ ಲಾಲಿಸಾದರೆ |
ಮೇರುಗಿರಿಯ ಸನಿಹದಿ ದಿತಿಯ ಕು |
ಮಾರನಾಗಿಹ ವಜ್ರನಾಭನು | ಭೂರಿಬಲನು || 9 ||

ಅನುಜನಾದ ಸುನಾಭ ಸಹಿತಲೆ |
ಘನಪರಾಕ್ರಮದಿಂದ ಮೆರೆದವ |
ಮನದಿರವ ಸೋದರನ ಕರೆದವ | ನೊರೆದನಾಗ || 10 ||

ತಮ್ಮ ಲಾಲಿಸು ತ್ರಿಜಗದಲಿ ನಾ |
ವೆಮ್ಮ ಶೌರ್ಯವ ಮೆರೆಸಿ ಕೀರ್ತಿಯ |
ನೊಮ್ಮೆ ಪಡೆಯದೆ ಫಲವದೇನೈ | ಸುಮ್ಮನಿರಲು || 11 ||

ನಿಜವಿದಗ್ರಜ ಜಗದಿ ನಮ್ಮಯ |
ಭುಜಬಲಕ್ಕೆಣೆ ಯಾರು ಸುರ ನರ |
ಭುಜಗರನು ಸದೆಬಡೆದು ಪಡೆಯುವ | ವಿಜಯವನ್ನು || 12 ||

ಆದರೊಂದುಂಟನುಜ ದಾನವ |
ಸೂದನನು ರಕ್ಷಿಸುವ ಕಪಟದಿ |
ಆದಿತೇಯರನವನ ಜೈಸುವ | ಹಾದಿಗಾಣೆ || 13 ||

ಇದಕೆ ಯೋಚನೆ ಏಕೆ ತಪದಲಿ |
ಪದುಮಸಂಭವನನ್ನು ಮೆಚ್ಚಿಸಿ |
ಮೊದಲು ವರಗಳ ಪಡೆದು ತೆರಳುವ | ಕದನಕೆನಲು || 14 ||

ಲೇಸನಾಡಿದೆ ತಮ್ಮ ಭಳಿರೆ ಶ |
ಭಾಸೆನುತ್ತನುಜನ ಸಹಿತ ದೈ |
ತ್ಯೇಶನೈದಿದ ಮೆಚ್ಚಿಸಲು ವಾ | ಣೀಶನಡಿಯ || 15 ||

**ವಾರ್ಧಕ (ಅರ್ಧ)**
ಇಳೆಯಧಿಪ ಲಾಲಿಸೈ ಖಳರು ಮೇರುವಿನ ತ |
ಪ್ಪಲಲಿ ಸ್ನಾನವ ಗೈದು ಸಲಿಲದಲಿ ಪಂಚಾಗ್ನಿ |
ಯಲಿ ತನುವ ನೆಲೆಗೊಳಿಸಿ ಹಲಕಾಲ ತಪದೊಳಿರೆ ನಳಿನಭವನೊಲಿದು ಬಂದು || 16 ||

**ಕಾಪಿ - ಅಷ್ಟ**
ಭಳಿರೆ ಮೆಚ್ಚಿದೆ ನಿಮ್ಮ ತಪಕೆ | ಭರ |
ದಲಿ ಪೇಳಿರೇನುಂಟು ಬಯಕೆ ||
ಸಲಿಸಬೇಕದನೆಂದು | ಒಲಿದು ಬಂದಿಹೆನಿಂದು |
ಛಲದ ತಪವ ಬಿಡಿ | ತಳುವದೆನ್ನಲಿ ಬೇಡಿ || 17 ||

**ಕಾಂಭೋದಿ - ಝಂಪೆ**
ಸರಸಿಜಾಸನ ದೇವ ಕರುಣನಿಧಿ ಮುದದೊಳವ |
ಧರಿಸು ಬಿನ್ನಪವ ದಯವಿರಿಸಿ ||
ಸುರನರೋರಗರಿಂದ ಹರಿಹರಾದಿಗಳಿಂದ |
ಮರಣವಿಲ್ಲೆಂದನುಗ್ರಹಿಸಿ || 18 ||

ನವರತ್ನ ಖಚಿತ ವಜ್ರಪುರವನ್ನು ನಮಗಿತ್ತು |
ಭುವನದಲಿ ನಮ್ಮಾಜ್ಞೆ ಹೊರತು ||
ಪವನನಾದರೆಯು ಒಳಪೊಗಲರಿಯದಂತೆ |
ಜವದಿಂದ ವರಗಳನ್ನಿತ್ತು || 19 ||

ಕಾಲ ಕಾಲಗಳಲ್ಲಿ ಸಂಪದಗಳೆಲ್ಲ ನಾವ್ |
ಪೇಳದಿದ್ದರು ತುಂಬುವಂತೆ ||
ಪಾಲಿಸೈ ವರಗಳನ್ನೆನುತೆರಗೆ ಶಾರದಾ |
ಲೋಲನಿಂತೆಂದ ದೈತ್ಯರಿಗೆ || 20 ||

ಇತ್ತೆ ಸಕಲವನಾದರಿನ್ನು ಜನಿಸಿದರಿಂಗೆ |
ಮೃತ್ಯು ಒಂದಿದೆ ಜಗದಿ ನಿಮ್ಮ ||
ಪುತ್ರಿಯರ ಪತಿಗಳಿಂದಲ್ಲದನ್ಯರೊಳಿಲ್ಲ |
ಧಾತ್ರಿಯಲಿ ಮೃತಿ ಎಂದ ಬೊಮ್ಮ || 21 ||

**ಭಾಮಿನಿ**
ತಳೆಯಲಂತರ್ಧಾನವನು ಕಂ |
ಗೊಳಿಸೆ ನವರತ್ನಗಳ ಪ್ರಭೆಯಲಿ |
ಬೆಳೆಗುತಿಹ ಪುರ ವಿಧಿಯ ಕರುಣದಿ ವಜ್ರಪುರವೆಂದು ||
ಖಳರು ಪೆಸರನ್ನಿರಿಸಿ ಸಂಪದ |
ಗಳಲಿ ರಂಜಿಪ ಪುರದೊಳಿರುತಿರೆ |
ತಿಳಿದು ದಾನವರೈದಿ ಸೇರಿದರಲ್ಲಿ ದಿನದಿನದಿ || 22 ||

**ಸೌರಾಷ್ಟ್ರ - ತ್ರಿವುಡೆ**
ದೈತ್ಯರೀಪರಿ ಬಂದು ಸೇರಲು |
ಮತ್ತನಾಗುತ ವಜ್ರನಾಭನು |
ಬಿತ್ತರಿಸಿದನು ವಿಧಿಯ ವರಗಳ | ವೆತ್ತು ನಾವು || 23 ||

ಬರ್ದಿಲರ ಸಂಗ್ರಾಮದಲಿ ನೆರೆ |
ಮರ್ದಿಸುತ ನಾಕವನು ಪಾಲಿಸ |
ದಿರ್ದರಿನ್ನೇನು ಫಲ ಭುಜಬಲ | ವಿರ್ದು ನಮಗೆ || 24 ||

ಯಾತುಧಾನರು ನುಡಿದರಾಕ್ಷಣ |
ಏತಕಿದಕನುಮಾನ ಬಡ ಪುರು |
ಹೂತ ಮುಖ್ಯರ ಬಗೆವರಲ್ಲೆನ | ಲಾತ ಪೊರಟ || 25 ||

ಧರಿಸಿ ಶಸ್ತ್ರಾಸ್ತ್ರಗಳ ಸುಮನಸ |
ಪುರಕೆ ದಾಳಿಯನಿಡಲು ಕಾಣುತ |
ಚರರು ಭಯದಲಿ ಬಂದು ನುಡಿದರು | ಸುರಪನೊಡನೆ || 26 ||

**ಮುಖಾರಿ - ಏಕ**
ಲಾಲಿಸಿ ಕೇಳೆಮ್ಮ ಬಿನ್ನಪವ | ನಮ್ಮೊಡೆಯ ಮಘವ |
ಖೂಳ ದಾನವರು ಮುತ್ತಿ ಪುರವ ||
ದಾಳಿಯಿಟ್ಟು ಸುರ | ಜಾಲವ ಪರಿಪರಿ |
ಗೋಳು ಗುಟ್ಟಿಸುವರು | ಪೇಳುವದೇನದ || 27 ||

ನೂತನವಾಗಿರ್ಪ ವಜ್ರಪುರ | ಉಂಟಂತೆ ಕಮಲ |
ಜಾತನ ಕರುಣದಿಂದಲವರ ||
ಯಾತುಧಾನರಿಗೆ ನಾಥನಾಗಿ ಸಹ |
ಜಾತ ಸಹಿತ ಖಳವಜ್ರನಾಭ ನಿ |
ರ್ಭೀತಿಯೊಳಾಳುತಲಿರ್ಪನಂತೆ ಹರಿ |
ಯಾತನಂತೆ ಪುರುಹೂತಾದ್ಯರಿಗೆ || 28 ||

ಜ್ಯೇಷ್ಠರೆಂದರಿತು ಮನ್ನಿಸುತ್ತ | ನಾಕವ ಬಿಟ್ಟು |
ಕೊಟ್ಟರೆ ಪೊರೆವನಂತೆ ನಿರತ ||
ದಿಟ್ಟತನವ ತೋರಲು ಸುರರೆಲ್ಲರ |
ಕುಟ್ಟಿ ಕೆಡಹಿ ವಶಗೈದಪೆ ನಾ ಪರ |
ಮೇಷ್ಠಿ ವರದಿ ಲೆಕ್ಕಿಪನಲ್ಲೆನುತಲೆ |
ಅಟ್ಟಹಾಸದಲಿ ದುಷ್ಟನು ಮೆರೆವ || 29 ||

**ಭೈರವಿ - ಅಷ್ಟ**
ಚಾರರ ನುಡಿ ಕೇಳುತ್ತ | ರೋಷದಲಿ ಬ |
ಲಾರಿಯು ಗರ್ಜಿಸುತ್ತ ||
ಘೋರನೆ ಸುಮನಸ | ವಾರಕೆ ನುಡಿದ ವಿ |
ಸ್ತಾರದೊಳಿಂತೆನುತ || 30 ||

ಕೇಳಿ ತ್ರಿದಶರೆಲ್ಲರು | ನಮ್ಮೊಡನಿಂದು |
ಕಾಳಗಕೈತಂದರು ||
ಖೂಳ ದಾನವರ ಕಟ್ಟಾಳುತನಕೆ ಯತ್ನ |
ಪೇಳಿರೆಂದೆನಲೆಲ್ಲರು || 31 ||

ಅನಿಲ ಗರ್ಜಿಸುತೆಂದನು | ರಣಕೆ ಪೋಗ |
ಲನುಮಾನವೇತಕಿನ್ನು ||
ಅನಿಮಿಷರಧಟ ತೋರುವೆನು ದಾನವರಿಗೆ |
ಅನುವರದೊಳಗೆ ನಾನು || 32 ||

ವರುಣನೊರೆದ ಶೌರ್ಯದಿ | ಕಮಲಭವ |
ಕರುಣಿಸಿರುವ ವರದಿ ||
ಶಿರಕೇರಿದುದು ಮದ ದುರುಳರಿಗಿಳುಹುವೆ |
ಶರಮುಖದಲಿ ರಣದಿ || 33 ||

ಲೇಸನಾಡಿದಿರೆನ್ನುತ್ತ | ಪೊರಟನಾಗ |
ವಾಸವ ಗಜವೇರುತ್ತ ||
ಭಾಸಿಪ ಕುಲಿಶವ ಪಿಡಿದು ಬರ್ದಿಲರನು |
ತಾ ಸಮರಕೆ ಕೂಡುತ || 34 ||

**ಭೈರವಿ - ಏಕ**
ಕೊಡು ಸಮರವನೆನ್ನಲ್ಲಿ | ಬಲ |
ಕೆಡಹುತ ನೀ ಗರ್ವದಲಿ ||
ನಡೆವುದು ಪೌರುಷವಲ್ಲ | ನಿನ |
ಗಡಸಿತು ದಿಟ ಕಡೆಗಾಲ || 35 ||

ನಿನ್ನ ಗೆಲಿದು ಫಲವೇನು | ಬಿಡು |
ಗಣ್ಣರೊಡೆಯ ಬರಲಿನ್ನು ||
ಎನ್ನಲಿ ಸೆಣಸಲ್ಕವನು | ರಣ |
ದುನ್ನತಿಕೆಯ ತೋರುವೆನು || 36 ||

ಮುರಿವುದಕೆ ತೃಣವನ್ನು | ಘನ |
ಪರಶುವ ತರಲೇಕದನು ||
ನೆರೆ ಚಿವುಟಿ ಕೆಡೆಯಬಹುದು | ಸಂ |
ಗರದಲಿ ನೀ ಪರಿಕಿಪುದು || 37 ||

ದನುಜರ ವಂಚಿಸಿ ಸುಧೆಯ | ಕುಡಿ |
ದನಿಮಿಷರಹುದೈ ಶೌರ್ಯ ||
ಅನುವರದಲಿ ಪರಿಕಿಪೆನು | ನೋ |
ಡೆನುತೆಚ್ಚನು ಶರವನ್ನು || 38 ||

**ಭೈರವಿ - ಅಷ್ಟ**
ಪಾಕಶಾಸನನೆ ಕೇಳು | ಬರಿದೆ ರಣ |
ವೇಕೆ ನಿನಗೆ ಎನ್ನೊಳು ||
ನಾಕವನಿತ್ತು ಮನ್ನಿಸೆ ಸಲಹುವೆ ಸುರಾ |
ನೀಕವ ಕರುಣದೊಳು || 39 ||

ವ್ಯರ್ಥ ಸುರಪುರವನು | ಬಯಸಿ ಬಂದೆ |
ಧೂರ್ತನೆ ಕಮಲಜನು ||
ಇತ್ತಿಹ ವಜ್ರಪುರದಲಿ ತೃಪ್ತಿ ಪಡೆಯದೆ |
ಮತ್ತನಾಗುತಲೆ ನೀನು || 40 ||

ಹಿರಿಯರು ದಿತಿಸುತರು | ನಾಕವನಾಳು |
ವರೆ ದಾನವರು ಬಾಧ್ಯರು ||
ಸುರರು ಕನಿಷ್ಠರಾಗಿರೆ ನಮ್ಮಯ ಸೇವೆಯೊ |
ಳಿರಬೇಕು ನೀವೆಲ್ಲರು || 41 ||

ಹಿರಿಯವರೆಂದು ಬಂದು | ದಾನವರೆಲ್ಲ |
ಧುರಕೆ ನಮ್ಮೊಡನೆ ನಿಂದು ||
ಹರಣವನಿತ್ತುದನರಿಯೆ ನೀನೆನುತಲೆ |
ಶರವೆಚ್ಚನುರೆ ಮುಳಿದು || 42 ||

ಎಚ್ಚ ಶರವ ತರಿದು | ಸಲಹುವನು |
ಅಚ್ಯುತ ನಿಮ್ಮನೆಂದು ||
ಹುಚ್ಚನಾಗಿಹೆ ನೀನು ಬೆಚ್ಚುವನಲ್ಲ ನಾ |
ಕೊಚ್ಚುವೆ ನಿಮ್ಮನಿಂದು || 43 ||

**ಕಂದ**
ಇಂತಾ ಸಮರ ಮೆರೆಯೆ ಧೀ |
ಮಂತಂ ಧೀಷಣನು ಸುರಪತಿಗೆ ಜಯವಿಲ್ಲೆಂ ||
ದಂತರ್ಯದಿ ತಿಳಿದಾಕ್ಷಣ |
ತಾಂ ತಳುವದೆ ಬಂದು ಧುರವ ನಿಲಿಸುತ ನುಡಿದಂ || 44 ||

**ಖರಹರಪ್ರಿಯ - ಅಷ್ಟ**
ಸೈರಿಸು ವಜ್ರನಾಭಾಖ್ಯ | ನಿನ್ನ |
ನ್ಯಾರಿಗೆ ಗೆಲುವಡೆ ಶಕ್ಯ ||
ಧೀರನಹುದು ಬಲವೈರಿಯೊಳೀಪರಿ |
ವೈರವದೇಕೆ ವಿಚಾರಿಸಿ ನೋಡಯ್ಯ || 45 ||

ಅನುಜಾಗ್ರಜರು ಸುರಾಸುರರು | ನೀವು |
ಮುನಿ ಕಾಶ್ಯಪನ ಕುವರರು ||
ಅನುದಿನ ನಾಕದ ಸಂಪದಕೀ ಪರಿ |
ಸೆಣಸಾಡಿಕೊಂಡಿರ್ಪುದನುಚಿತ ನಿಮ್ಮೊಳು || 46 ||

ತೆರಳಿ ನಿಮ್ಮಯ್ಯನ ಬಳಿಗೆ | ಇದ |
ನರುಹಿ ಮತ್ತವನೆಂದ ಹಾಗೆ ||
ಸುರಪುರವಾಳುತ್ತಲಿರುವುದುಚಿತ ವ್ಯರ್ಥ |
ಧುರವೇಕೆ ಪೋಗಿ ಕಾಶ್ಯಪ ಮುನಿಯಲ್ಲಿಗೆ || 47 ||

ಎಂದು ಸಂತೈಸುತ್ತಲವನ | ಕರೆ |
ದೆಂದ ಗುಪಿತದಿ ವಾಸವನ ||
ಮಂದಮತಿಯ ಧುರದಿಂದ ಗೆಲಲರಿದು |
ಮುಂದೆ ಯತ್ನವ ನೋಳ್ಪುದಿಂದು ನೀ ಮನ್ನಿಸು || 48 ||

**ಸಾಂಗತ್ಯ - ರೂಪಕ**

ಧೀಷಣನೊರೆದುದು ದಿಟವೆಂದು ವಜ್ರನಾ |
ಭಾಸುರ ಕೂಡಿ ವಾಸವನ ||
ಕಾಶ್ಯಪ ಮುನಿಪನಾಶ್ರಮದೆಡೆಗೈದಿ ಬಿ |
ನ್ನೈಸಿಕೊಳ್ಳುವಡೆಲ್ಲ ಹದನ || 49 ||

ಋತ್ವಿಜೋತ್ತಮನಿರೆ ಸತ್ರಯಾಗದಿ ದಿತಿ |
ಪುತ್ರವಾಸವರೈದು ನಮಿಸೆ ||
ಭಕ್ತಿಯಿಂದಲಿ ಪರಸುತೆಂದನವರ ಕಾ |
ಣುತ್ತತಿ ಚೋದಿಗವೈಸೆ || 50 ||

ಅನುಜ ವಾಸವನೊಡನಿನಿತು ಬಂದಿಹುದೇನು |
ತನಯ ಪೇಳ್ಳೈ ವಜ್ರನಾಭ ||
ದನುಜ ತ್ರಿದಶರಿಗೊಮ್ಮನವಾಗೆ ಕಂಗಳಿ |
ಗನುದಿನ ನೋಡಲು ಹಬ್ಬ || 51 ||

ಮತವ ಪೇಳೆನೆ ಜೀಯ ದಿತಿದೇವಿ ಹಿರಿಯ ಹೆಂ |
ಡತಿ ನಿನಗಿನ್ನು ನಮ್ಮವ್ವೆ ||
ಶತಮನ್ಯು ಕಿರಿಯವ್ವೆ ಸುತನಾಗಿ ನಾಕಾಧಿ |
ಪತಿಯಾಗಿ ಮೆರೆವುದು ತರವೆ || 52 ||

ಅನಿಮಿಷರೊಡನೆ ನಾ ರಣಕೈದೆ ಬಂದು ಧೀ |
ಷಣನೆಂದ ನಿನ್ನಾಜ್ಞೆಯಂತೆ ||
ಅನುಭವಿಸಿರಿ ಸ್ವರ್ಗವೆನಲು ಬಂದೆವು ನ್ಯಾಯ |
ವನು ಪೇಳಿ ಸಲಹು ನೀ ಮುಂದೆ || 53 ||

**ಭಾಮಿನಿ**

ಸೋದರರು ಭಾವಿಸಲು ದಿತಿಸುತ |
ರಾದಿತೇಯರು ನಿಮ್ಮೊಳನುದಿನ |
ವಾದವಿದು ತರವಲ್ಲ ತೊಡಗಿದ ಸತ್ರಯಾಗವನು ||
ಮೋದದಿಂ ಪೂರೈಸಿ ಸನ್ಮತ |
ವಾದ ಹಿತವನ್ನೊರೆವೆ ನೀನೀ |
ಗೈದಿ ಪಾಲಿಸುತಿಹುದು ವಜ್ರಪುರವನು ಸಂತಸದಿ || 54 ||

**ಕಂದ**
ಪುರುಹೂತನು ಸುರಲೋಕದೊ |
ಳಿರಲೆನೆ ಪೊಡಮಟ್ಟು ವಜ್ರನಾಭನು ತಾನೈ ||
ತರುತಲೆ ವಜ್ರಪುರದೊಳಿರೆ |
ಪುರುಹೂತಂ ತೆರಳಿ ನಾಕವ ಪಾಲಿಸಿದಂ || 55 ||

**ಕಾಂಭೋದಿ - ಝಂಪೆ**
ಖಳ ವಜ್ರನಾಭನುಪಟಳ ತಪ್ಪದೈ ಮುಂದೆ |
ತಿಳುಹಿದರು ನೀತಿಯನು ಜನಕ ||
ಶಿಲೆಗೆ ನೀರೆರೆದಂತೆ ಫಲದೋರಲುಂಟೆ ನಾ |
ನುಳುಹಿಕೊಳ್ಳುವದೆಂತು ನಾಕ || 56 ||

ಬೇರೆ ಕಾಯುವರಿಲ್ಲ ಧಾರುಣಿಯ ಭಾರಾಪ |
ಹಾರಗೊಳಿಸಲು ಕೃಷ್ಣನಾಗಿ ||
ಕ್ಷೀರಸಾಗರಶಯನ ದ್ವಾರಕೆಯೊಳೀಗ ಅವ |
ತಾರವೆತ್ತಿಹನಲ್ಲಿ ಪೋಗಿ || 57 ||

ಅರಿಕೆಗೈದರೆ ನಮ್ಮ ಪೊರೆಯದಿರಲಾರ ನಾ |
ಕರುಣಸಾಗರದೇವನೆಂದು ||
ಪುರುಹೂತನಾಕ್ಷಣದಿ ಪೊರವಂಟು ಶ್ರೀಹರಿಯ |
ಚರಣಕೆರಗುತ ನುತಿಸೆ ಬಂದು || 58 ||

ಪಿಡಿದೆತ್ತಿ ಕರುಣದಲಿ ನುಡಿದನಾ ಮುರಮಥನ |
ಬಿಡುಗಣ್ಣರೊಡೆಯ ನೀನಿಂತು ||
ನಡೆತಂದುದೇನು ಸುರಗಡಣ ಕುಶಲದೊಳಿಹುದೆ |
ತೊಡಕು ಪೇಳ್ಯಾರಿಂದ ಬಂತು || 59 ||

**ಮಧ್ಯಮಾವತಿ - ಏಕ**
ದೇವರದೇವಾದಿದೇವ ಪರಾಕು |
ಶ್ರೀವರ ನೀನೆಮ್ಮನು ಕಾಯಬೇಕು ||
ಭಾವಜಪಿತ ನಿನ್ನ ದಯದಿಂದೀವರೆಗೆ |
ನಾವೆಲ್ಲ ನಾಕದೊಳಿರೆ ಸುಖದೊಳಗೆ || 60 ||

ಮೇರುಪರ್ವತದ ತೀರದಲಿ ರಂಜಿಸುವ |
ಭೂರಿಸಂಪದ ತುಂಬಿರುವ ವಜ್ರಪುರವ ||
ಸಾರಸಾಸನನ ಕರುಣದಿಂದ ಪಡೆದು |
ಘೋರ ದಾನವ ವಜ್ರನಾಭನೈತಂದು || 61 ||

ಮುತ್ತಿದ ನಾಕವ ಗೆಲಲರಿದೆಮಗೆ |
ಕೃತ್ರಿಮದಲಿ ತಿಳಿಹಿದೆವೆಮ್ಮ ಪಿತಗೆ ||
ಯುಕ್ತಿಯಿಂದಲಿ ಸಂತೈಸಿಹನು ದಾನವನ |
ದೈತ್ಯಾರಿ ಸಲಹೆಮ್ಮ ಸೇರಿದೆ ಚರಣ || 62 ||

**ಸೌರಾಷ್ಟ್ರ - ತ್ರಿವುಡೆ**
ವಾಸವನ ಪಿಡಿದೆತ್ತಿ ಕರುಣದಿ |
ವಾಸುದೇವನು ಯೋಚಿಸುತ ವಾ |
ಣೀಶನಿತ್ತಿಹ ವರದ ಬಲದಿಂ | ದೀಸು ಖಳರು || 63 ||

ಮತ್ತ್ರಾದರು ಯಾತುಧಾನರ |
ಪುತ್ರಿಯನು ವರಿಸಿದವನಿಂದಲೆ |
ಮೃತ್ಯು ಹೊರತಳಿವಿಲ್ಲ ನೋಡಲು | ದೈತ್ಯರಿಂಗೆ || 64 ||

ಆ ಪ್ರಭಾವತಿ ಮನವನೊಲಿಸಲು |
ದರ್ಪಕನ ಹೊರತಿಲ್ಲ ಚೆಲುವಿನೊ |
ಳಿರ್ಪವರೆನುತ ತಿಳಿದು ಬಳಿಕಾ | ಸರ್ಪಶಯನ || 65 ||

ಬಲವಿರೋಧಿಯೊಳೆಂದನಾ ಹರಿ |
ಕಳುಹಿ ನಾಕದ ಹಂಸೆಗಳನಾ |
ನಳಿನನೇತ್ರೆ ಪ್ರಭಾವತಿಯ ಮನ | ವಲಿಸಿಕೊಂಡು || 66 ||

ಮಾರನನು ಬಣ್ಣಿಸುತವಳ ಮನ |
ಸೂರೆಗೈದರೆ ವರಿಸಿ ಮದನನು |
ನೀರಜಾಕ್ಷಿಯ ದಾನವರ ಸಂ | ಹಾರಗೈವ || 67 ||

ಎಂದು ತಿಳುಹುತ ಕಳುಹೆ ನಾಕಕೆ |
ಬಂದು ಹಂಸೆಗಳೊಳಗೆ ಶುಚಿಮುಖಿ |
ಎಂದೆನುವ ಚದುರೆಯನು ಕರೆದಿಂ | ತೆಂದ ಮಘವ || 68 ||

**ಬಿಲಹರಿ - ಅಷ್ಟ**

ಲಾಲಿಸು ಶುಚಿಮುಖಿ ನೀನು | ಸುರ |
ಜಾಲವನುಳುಹುವಡೊಂದು ಕಾರ್ಯವನು ||
ಆಲಸ್ಯಗೊಳದೆ ಮಾಡುವದು | ವರ |
ಭೂಲೋಕದಲಿ ವಜ್ರಪುರವೊಂದಿರುವುದು || 69 ||

ಒಳಪೊಗಲರಿದು ಪುರವನು | ಹೊರ |
ವಳಯದೊಳಿರ್ದ ಸಾಧಿಸಿ ಸಮಯವನು ||
ಖಳನ ಕುವರಿ ಪ್ರಭಾವತಿಯ | ಮನ |
ವಲಿಸಿಕೊಂಬುದು ತೋರಿ ನಿನ್ನ ಚಾತುರ್ಯ || 70 ||

ಮಾರನ ಗುಣ ರೂಪಗಳನು | ನಿತ್ಯ |
ನಾರಿಗೆ ಬಣ್ಣಿಸುತವಳ ಮನವನು ||
ಸೂರೆಗೈದರೆ ಮನಸಿಜನು | ಸರ |
ಸೀರುಹವದನೆಯ ವರಿಸಿಕೊಳ್ಳುವನು || 71 ||

ಖಳನ ಸಂಹಾರವಾಗುವುದು | ನಿತ್ಯ |
ದಲಿ ದಾನವರ ವಾರ್ತೆಗಳನೆಲ್ಲ ತಿಳಿದು ||
ನಳಿನನಾಭಗೆ ಪೇಳ್ವುದೆಂದು | ಪೇಳೆ |
ಬಲವಿರೋಧಿಯಲಿ ಪೇಳಿದಳಾಗ ಮಣಿದು || 72 ||

ಇದಕೆ ಯೋಚನೆ ಏಕೆ ಜೀಯ | ವಿಧ |
ವಿಧದಲಿ ಮನವೊಲಿಸುತ ಪ್ರಭಾವತಿಯ ||
ಮದನನ ಮೇಲನುರಾಗ | ಗೊಂಬ |
ಹದನವ ಮಾಳ್ಪೆನಾಜ್ಞೆಯ ಪಾಲಿಸೀಗ || 73 ||

**ಕಂದ**
ಇಂದ್ರನ ನೇಮದಿ ತಾನೈ |
ತಂದಾ ಶುಚಿಮುಖಿಯು ವಜ್ರಪುರದ ಸನಿಹದಿ ||
ಅಂದದಿ ಮೆರೆವ ಸರೋವರ |
ಒಂದಿರೆ ಕಾಯ್ದಿರ್ದಳಲ್ಲಿ ತರುಣಿಯ ಬರವಂ || 74 ||

**ಮಧ್ಯಮಾವತಿ - ತ್ರಿವುಡೆ**
ಇತ್ತಲಾ ಖಳ ವಜ್ರನಾಭವ |
ಪುತ್ರಿಯಾದ ಪ್ರಭಾವತಿಯು ಬಳ |
ಲುತ್ತ ವಿರಹಾಗ್ನಿಯಲಿ ನುಡಿದಳು |
ಚಿತ್ತದೊಳಗೆ || 75 ||

ಉಳಿಯಗೊಡದೀ ಮಾರತಾಪವು |
ಅಳಿಯನಿಂದಳಿವೆಂದು ಜನಕನು |
ತಿಳಿದು ದೈತ್ಯರಿಗೀವ ಯೋಚನೆ |
ಗೊಳುತಲಿಹನು || 76 ||

ದುಷ್ಟರೀ ದೈತ್ಯರಲಿ ಪ್ರೇಮವು |
ಹುಟ್ಟದೆನ್ನಯ ಮನದಿ ನಾ ಮನ |
ವಿಟ್ಟು ಬಯಸಿದವನನು ವರಿಸಲು |
ಸೃಷ್ಟಿಯೊಳಗೆ || 77 ||

ಪಿತನು ಮನಗೊಡಲಾರ ಮುಂದಕೆ |
ಪಥವಗಾಣೆನು ಜಗದಿ ವಿಧಿಯ ಲಿ |
ಖಿತವ ಮೀರುವರ್ಯಾರಿಗಳವೆಂ |
ದತಿಶಯದಲಿ || 78 ||

ಹೊಂದಿರುವ ಬೇಸರವ ಕಳೆಯುವ |
ಡಿಂದು ನಾ ಜಲಕೇಳಿಗೈದುವೆ |
ನೆಂದವಳು ಹೊರವಂಟು ನಾರೀ |
ವೃಂದಸಹಿತ || 79 ||

ಪುರವ ಹೊರಬಾಹ್ಯೆಯೊಳಿಹ ಸರೋ |
ವರದೆಡೆಗೆ ನಡೆ ತರಲು ಶುಚಿಮುಖಿ |
ಯರಿತು ತನ್ನಯ ಮನದಿ ತಾನಿಂ |
ತೊರೆದಳಾಗ || 80 ||

**ಕಾಂಭೋದಿ - ಝಂಪೆ**
ನಳಿನವರಳಿದಡೇನು | ಫಲವು ಮಧುವನು ಹೀರಿ |
ಕೊಳುವ ಭ್ರಮರಗಳೈದದಿರಲು ||
ಚೆಲುವ ಸುಮಲತೆ ಹಬ್ಬಿ | ಗೊಳೆ ವೃಕ್ಷದಾಶ್ರಯವು |
ಸಿಲುಕದಿರೆ ಕೆಡದೆ ಧಾತ್ರಿಯೊಳು || 81 ||

ನೀರಿಲ್ಲದಿಹ ಕೊಳವ | ಸೂರ್ಯನಿಲ್ಲದ ನಭವ |
ನ್ಯಾರು ಮೆಚ್ಚುವರೆಂಬ ನುಡಿಗೆ ||
ಏರಿದುದು ವಿರಹಾಗ್ನಿ | ಘೋರನೇ ಕರೆಸುತಾ |
ನಾರಿ ಪೇಳಿದಳು ಶುಚಿಮುಖಿಗೆ || 82 ||

**ಶಂಕರಾಭರಣ - ಅಷ್ಟ**
ಯಾರಮ್ಮ | ಸುವಿಚಾರೆ ಶೃಂಗಾರೆ ನೀ |
ಯಾರಮ್ಮ || ಪಲ್ಲವಿ ||
ಯಾರಮ್ಮ ನೀ ಹಂಸರಾಣಿ || ಸುವಿ |
ಚಾರೆ ಕೇಳಲು ನಿನ್ನ ವಾಣಿ | ನಿನ್ನ |
ಊರಾವುದೆಲೆ ಗುಣಶ್ರೇಣಿ | ಇದು |
ಭೂರಿ ಚೋದಿಗ ಮನುಜರೆ ನೆರೆ ಮಿಗಿಸುತ |
ಸಾರವಚನಗಳ ನುಡಿಯುತ್ತಲಿರ್ಪುದು || 83 ||

ಮುನಿ ಕಾಶ್ಯಪನ ಸತಿಯರಲಿ | ಸುರ |
ದನುಜ ಗರುಡರುದಿಸುತಲಿ | ನಾವು |
ಅನುಜಾಗ್ರಜರು ಧಾರುಣಿಯಲಿ | ವರ |
ವನಜಾಕ್ಷಿ ಶುಚಿಮುಖಿಯೆನುವರು ನಾಕವಾ |
ಸಿನಿ ಸಂಚರಿಸಲು ಮೇದಿನಿಗಾಗಿ ಬಂದೆನು || 84 ||

ಅಮರಲೋಕದ ಹಂಸೆಯೇನೆ | ಕಂಡು |
ಅಮಿತಕೌಶಲಗಳ ಜಾಣೆ | ಮನ |
ಭ್ರಮೆಗೊಂಡುದಿಂದು ನಿನ್ನಾಣೆ | ಇನ್ನು |
ಗಮಿಸಿ ನಮ್ಮೊಡನಿರ್ದು ನಿನ್ನ ವಚನವೆಂಬ |
ಅಮೃತವನುಣಬಡಿಸವ್ವ ನೀನನುದಿನ || 85 ||

ಒಡನೆಂದಳನುಮಾನವೇಕೆ | ವರ |
ಜಡಜಗಂಧಿನಿ ನಿನ್ನಪುರಕೆ | ಬಹೆ |
ನೊಡನೆ ಸಲಿಸಲಿನ್ನು ಬಯಕೆ | ಬಿಡು |
ಬಿಡು ಸಂಶಯವನೆನಲೊಡಗೊಂಡು ಹಂಸಿಯ |
ನಡೆತಂದು ಮಂದಿರದೆಡೆಗೆ ಪ್ರಭಾವತಿ || 86 ||

**ಪೀಲು - ಅಷ್ಟ**
ಬಳಿಕೊಂದು ದಿನ ಶುಚಿಮುಖಿ ಪ್ರಭಾವತಿಯ |
ಬಳಿಗೈದಿ ನುಡಿದಳು ಕಂಡು ಕಾಮಿನಿಯ ||
ಎಲೆಗೆ ಕೋಮಲೆಯೆ ನಿನ್ನಂದದ ಸತಿಯ |
ರಿಳೆ ಮೂರರೊಳಗಿಲ್ಲವೇನೆಂಬೆ ಬಗೆಯ || 87 ||

ವ್ಯರ್ಥವಾಗುತಿದೆ ಯೌವನವೀ ಪರಿಯಲಿ |
ಮತ್ತೆ ಬಾರದು ಬಯಸಿದ ವೇಳೆಯಲ್ಲಿ ||
ಪೃಥ್ವಿಯೊಳ್ ಪತಿಯೊಡನಾಟದಿ ಮಿನುಗುವ |
ಮತ್ತೊಂದು ಸುಖವಿಲ್ಲ ಸತಿಗೆ ಕೇಳ್ ನಿಜವ || 88 ||

ಕುಲಶೀಲರೂಪಗಳೊಳಗೆಣೆಯಾದ |
ಚೆಲುವನ ವರಿಸಿಕೊಳ್ಳುತ ನಿತ್ಯಮೋದ ||
ಗೊಳದೆ ಸುಮ್ಮನಿರುವದಿದೇನು ಚಂದ |
ತಿಳುಹೆನೆ ನುಡಿದಳಾಕೆಗೆ ಕ್ಲೇಶದಿಂದ || 89 ||

ನುಡಿ ನಿಜವಾದರೇನ್ ಗೈವೆ ಜನಕಗೆ |
ಮಡಿವು ತನ್ನಳಿಯನಿಂದೆನುತಿರ್ಪ ಬಗೆಗೆ ||
ಕೊಡುವ ಯೋಚನೆ ಗೈವ ದಾನವರೊಳಗೆ |
ಕಡು ದುಷ್ಟರಲಿ ಮನವಿಲ್ಲ ಕೇಳೆನಗೆ || 90 ||

ಮನಕೊಲಿದವನ ವರಿಸುವ ಸ್ವಾತಂತ್ರ್ಯ |
ಎನಗಿಲ್ಲವದರಿಂದ ಬಳಲುವೆ ನಿತ್ಯ ||
ತನುವಳಿದರು ವರಿಸುವಳಲ್ಲ ದೈತ್ಯ |
ರನು ಸಖಿ ಕೇಳೀಗ ನುಡಿಯಿದು ಸತ್ಯ || 91 ||

ಸರಸಿಜಮುಖಿ ನಿನ್ನ ವರಿಸುವ ಭಾಗ್ಯ |
ದುರುಳರಿಗೆಲ್ಲಿಂದ ಬಹುದಿನ್ನು ಯೋಗ್ಯ ||
ಸ್ಮರನೋರ್ವನಲ್ಲದನ್ಯರ ಕಾಣೆ ನಾನು |
ವರಿಸಿದರವ ಪುಣ್ಯವಂತೆ ನೀನಿನ್ನು || 92 ||

ಮೂರು ಲೋಕಗಳ ಸೌಂದರ್ಯ ಸಾರ |
ಸೇರಿಸಿ ಸೃಷ್ಟಿಯಾದವನೊಬ್ಬ ಮಾರ ||
ನೀರು ನದಿಯಲಿ ದ್ರವಿಸುವಂತೆ ಸ್ಮರನ |
ನಾರಿ ಕಂಡರೆ ದ್ರವಿಸುವದಾಕೆ ಜಘನ || 93 ||

**ಕಂದ**
ಎಂದಾ ಶುಚಿಮುಖಿ ಬಣ್ಣಿಸೆ |
ಕಂದರ್ಪನ ಕೇಳಿ ಮಾರನಸ್ತ್ರದ ಹತಿಗೆ |
ನೊಂದು ಪ್ರಭಾವತಿ ಬಳಿಕಿಂ |
ತೆಂದಳು ಹಂಬಲಿಸಿ ಶುಚಿಮುಖಿಯೊಳೀ ತೆರದಿಂ || 94 ||

**ಕಲ್ಯಾಣಿ - ಅಷ್ಟ**
ಅಂಥ ಚೆಲುವನೇನೆ | ಮನ್ಮಥ ದೇವ |
ಅಂಥ ಮಹಿಮನೇನೆ ||
ಅಂಥ ಮಹಿಮನೇನೆ | ಕಾಂತೆ ನೀ ನುಡಿ ಜಾಣೆ |
ಕಂತು ಚರಿತೆಗಳನಾ | ದ್ಯಂತ ಕೇಳುವೆನೆಲ್ಲ || 95 ||

ದಿನಪನ ತೇಜದಲಿ | ಪೋಲುವ ಪಾವ |
ಕನ ತನುಕಾಂತಿಯಲಿ ||
ವನಧಿಯ ಗಂಭೀರ | ಮನಸಿಜನಿನ್ನು ಶ್ರೀ |
ತ್ರಿಣಯನ ವರದಿಂದ | ಜನಿಸಿದ ಕೃಷ್ಣಗೆ || 96 ||

ಅರಿತು ಮಾಯಕ ವಿದ್ಯೆಯ | ಶಂಬರನಿಂದ |
ತರಿದನಾತನ ತಲೆಯ ||
ಅರಿತವರ್ಯಾರಿನ್ನು | ಸುರನರದನುಜರೊಳ್ |
ಸರಿಗಾಣೆ ನಾ ಸುಮ | ಶರನ ಪ್ರತಾಪಕೆ || 97 ||

**ಕಂದ**
ಮದನನ ಗುಣರೂಪಗಳಂ |
ವಿಧವಿಧದಲಿ ಬಣ್ಣಿಸಲ್ಕೆ ಶುಚಿಮುಖಿಯಾಗಂ ||
ಸುದತಿ ಪ್ರಭಾವತಿ ಬರಿಸುವ |
ಹದನವದಿನ್ನೆಂತು ಸ್ಮರನ ವರಿಸುವಡೆನುತಂ || 98 ||

**ಹಿಂದೋಳ - ರೂಪಕ**
ಏನುಸುರಲಿ ಶುಚಿಮುಖಿ ಸುಮ |
ಬಾಣನ ಮಹಿಮೆಯನಾಲಿಸಿ |
ಮಾನಸದಲಿ ವರಿಸಿದೆ ನಾ | ಮೀನಾಂಕನ ದಿಟದಿ ||
ಕಾಣೆನು ಪಥವನು ಪ್ರೇಮದಿ | ತಾನೈತರುತಲೆ ಎನ್ನನು |
ಪ್ರಾಣೇಶನು ವರಿಸುವ ಬಗೆ | ನೀನೊರೆಯುವದೆನಗೆ || 99 ||

ದಿತಿಜ ಕುಲಾಂತಕ ಕೃಷ್ಣನ | ಸುತನಾಗಿರಲಾ ಮಾರನ |
ಪಿತನರಿತರೆ ಬಿಡುವನೆ ಸ | ನ್ಮತದಲಿ ಕೊಡುವಡೆ ||
ಮತಿಯುತೆ ನಾನೀ ಜಗದಲಿ | ಇತರರ ಕಾಣೆನು ನೀನೆ ಯು |
ಕುತಿಗಳ ಪೇಳುತ ಸಲಹೆ | ನ್ನುತ ಬೇಡುವೆ ನಿನ್ನ || 100 ||

ಹರಣವನುಳುಹೆನುತಲಿ ತರ | ಹರಿಸುವ ಸತಿಗೆಂದಳು ಬಿಡು |
ತರಳಾಕ್ಷಿಯೆ ಕ್ಲೇಶವ ನೀ | ಪರಿಕಿಸು ಸಾಹಸವ ||
ತೆರಳುವೆ ನಾ ಮನಸಿಜನನು | ಪರಿಪರಿ ಬೋಧಿಸಿ ನಿನ್ನನು |
ವರಿಸುವ ಯತ್ನವಗೈವೆನು | ಧರಿಸಿಕೊ ಧೈರ್ಯವನು || 101 ||

**ವಾರ್ಧಕ**
ಪೇಳಿ ನಿನ್ನಯ ಪಿತಗೆ ನಿಖಿಳ ಸತ್ಕಥೆಗಳಂ |
ಪೇಳುವ ಚದುರೆ ಹಂಸಿಯೆಂದೆನ್ನ ಕರೆಸಲನು |
ಕೂಲವದಗಿಸಲು ದೈತ್ಯೇಶನೆಡೆಗೈದಿ ನಿನ್ನಿಷ್ಟಾರ್ಥ ಸಿದ್ಧಿಸುವೆನು ||
ಜಾಲ ಮಾತಲ್ಲ ನೀ ನಂಬಿಕೊಳ್ಳೆನುತಲಾ |
ನೀಲಕುಂತಳೆಗರುಹಿ  ಶುಚಿಮುಖಿಯು ನಡೆತಂದು |
ಶ್ರೀಲಲಾಮನ ಚರಣಕೆರಗುತ್ತ ಬಿನ್ನೈಸಿದಳು ಸತಿಯ ಮನದಿರವನಂದು || 102 ||

**ಬೇಹಾಗ್ - ಏಕ**
ಕರುಣಾಕರ ಶ್ರೀಹರಿ ಸರ್ವೋತ್ತಮ |
ಅರಿಕೆಯ ಗೈದಪೆನೆಲೆ ಜೀಯ ||
ಸುರಪನ ನೇಮದಿ | ತೆರಳುತ ಬೇಗದಿ |
ಸರಸಿಜವದನೆ ಪ್ರಭಾವತಿಯ || 103 ||

ನೆರೆ ಬೋಧಿಸಿ ಸುಮ | ಶರನಲಿ ಮನವ |
ನ್ನೆರಕಗೊಳಿಸಿ ಬಂದೆನು ದೇವ ||
ಸ್ಮರನನು ಮನದಲಿ | ನೆನೆ ನೆನೆಯುತ್ತಲಿ |
ತರಹರಿಸುತ ಕಳೆವಳು ದಿನವ || 104 ||

ಮುಂದೆ ದೈತ್ಯರನು | ಕೊಂದು ಸುಮನಸರ |
ಚಂದದಿಂದ ರಕ್ಷಿಪ ಭಾರ ||
ಸಿಂಧುಶಯನ ನಿನ | ಗೆಂದು ನಮಿಸಲೊಡ |
ನೆಂದನು ದಿವಿಜಜನೋದ್ಧಾರ || 105 ||

**ಸೌರಾಷ್ಟ್ರ - ತ್ರಿವುಡೆ**
ಅನಿಲನಾದರು ಪೊಗಲರಿಯ ದೈ |
ತ್ಯನ ಪುರವ ಖಳನಾಜ್ಞೆ ಹೊರತಾ |
ಕನಕಗರ್ಭನ ವರದ ಬಲವಿದ | ಕೆನುವದೇನು || 106 ||

ಕುಸುಮಸಾಯಕ ಪುರವ ಪೊಗುತಲಿ |
ಶಶಿಮುಖಿಯ ವರಿಸುತ್ತ ಸಮರದೊ |
ಳಸುರರನು ಮರ್ದಿಸುವ ಪಥ ಕಾ | ಣಿಸದೆನುತಿರೆ || 107 ||

**ಕಾಂಭೋದಿ - ಝಂಪೆ**
ಭದ್ರನೆಂಬೋರ್ವ ಭಾಗವತೋತ್ತಮನು ಬಹಳ |
ಶ್ರದ್ಧೆಯಲಿ ವಲಿಸಿ ಶಾರದೆಯ ||
ವಿದ್ಯಾನಿಪುಣನಾಗಿ ನೃತ್ಯಗಾಯನಗಳುರೆ |
ಸಿದ್ಧಿಯಾಗಿರಲು ಮೇದಿನಿಯ || 108 ||

ವರ ಮನೋವೇಗದಿಂ ಚರಿಸುವಂದದಿ ರೋಗ |
ಜರೆಗಳೊದಗದ ತೆರದಿ ತ್ರಿಜಗ ||
ವರನೃತ್ಯಗಾಯನಕೆ ಮರುಳಾಗುವಂತೆ ಪಡೆ |
ದಿರೆ ವರವನೈತಂದನಾಗ || 109 ||

ಕ್ಷೀರಸಾಗರವಾಸ ದ್ವಾರಕಾಪುರದೊಳವ |
ತಾರವೆತ್ತಿರಲವನ ಪದದಿ ||
ತೋರಿ ನೃತ್ಯಗಳ ಲಕ್ಷ್ಮೀರಮಣನೊಲುಮೆಗೊಳ |
ಲ್ಯಾರು ತನಗೆಣೆ ಮುಂದೆ ಜಗದಿ || 110 ||

ಎಂದು ನಿಶ್ಚಯಿಸಿ ನಡೆತಂದಾಗ ದ್ವಾರಕಿಗೆ |
ಇಂದಿರೇಶನ ಪದಕೆ ಮಣಿದು ||
ಸಿಂಧುಶಯನನೆ ರಕ್ಷಿಸೆಂದೆನುತ ತಾಳಲಯ |
ದಿಂದ ನರ್ತಿಸಲು ಮುಂದುವರೆದು || 111 ||

ಪರಿಕಿಸುತಲಾ ಹರಿಯು ಸುರನರ ಭುಜಗರೊಳೀ |
ಪರಿ ನರ್ತಿಸುವರ ಕಾಣೆ ||
ಅರುಹು ನೀನಾರು ನಿನ್ನಿರವೇನೆನಲು ನುಡಿದ |
ವರಭದ್ರ ಜಲಜಾಕ್ಷನೊಡನೆ || 112 ||

**ಕೇದಾರಗೌಳ - ಅಷ್ಟ**
ಕರುಣಸಾಗರ ಲಕ್ಷ್ಮೀವರ ಕೃಪೆಯಿಂದವ |
ಧರಿಸು ಬಿನ್ನಹಗಳನು ||
ನೆರೆ ತಪದಲಿ ಬ್ರಹ್ಮನರಸಿಯ ಮೆಚ್ಚಿಸು |
ತರಿತೆಲ್ಲ ವಿದ್ಯೆಯನು || 113 ||

ನಿತ್ಯ ಜಗದೊಳೆನ್ನ ನೃತ್ಯಗಾನದಿ ಮೆಚ್ಚಿ |
ಸುತ್ತಿಹೆ ಸುರನರರ ||
ಭಕ್ತವತ್ಸಲನೆ ಕೃತಾರ್ಥನಾದೆನು ಈಕ್ಷಿ |
ಸುತ್ತ ಚರಣವಿದರ || 114 ||

ವನಜಾಕ್ಷ ಭದ್ರನೆಂದೆನುತ ಕರೆಯುವರೆ |
ನ್ನನು ಪೊರೆ ಕೃಪೆ ಇರಿಸಿ ||
ಎನುತ ವಂದಿಸಲಾತನನು ಪಿಡಿದೆತ್ತುತೆಂ |
ದನು ಮನದಲಿ ಯೋಚಿಸಿ || 115 ||

**ಸಾಂಗತ್ಯ - ರೂಪಕ**
ಭದ್ರ ಭಾಗವತೋತ್ತಮನೆ ಕೇಳು ಸುರರಿಗು |
ಪದ್ರವೀಯುವ ದಾನವನನು ||
ಮರ್ದಿಸಿ ಧರ್ಮಸಂರಕ್ಷಣೆಗೈವರೆ |
ಸಾಧ್ಯವೀ ನೃತ್ಯದೊಳಿನ್ನು || 116 ||

ಮನಸಿಜ ವರಿಸದೆ ವನಿತೆ ಪ್ರಭಾವತಿ |
ಯನು ಕೊಲ್ಲಲರಿದು ದೈತ್ಯನನು ||
ದನುಜೇಶ ವಜ್ರನಾಭನ ಪುರ ಪೊಗುವಡ |
ಪ್ಪಣೆ ಹೊರತಸದಳವಿನ್ನು || 117 ||

ಕುಶಲ ವಿದ್ಯೆಯೊಳು ನೀ ವಶಗೈದು ದೈತ್ಯರ |
ಕುಸುಮಬಾಣಾದಿ ಯಾದವರ ||
ಬಿಸರವ ಪೊಗುವಡೊದಗಿಸನುಕೂಲವು |
ಅಸುರರ ತರಿವನು ಮಾರ || 118 ||

ಹರಿಯೆ ನಿನ್ನಯ ದಿವ್ಯ ಚರಣಗಳೊಲುಮೆಯೊಂ |
ದಿರಲು ದೈತ್ಯರ ಮೋಹಗೊಳಿಸಿ ||
ದುರುಳರ ಸ್ಮರನು ಸಂಹರಿಸುವಂತೆಸಗುವೆ |
ಪರಿಕಿಸೆಂದನು ಭದ್ರ ನಮಿಸಿ || 119 ||

**ಭಾಮಿನಿ**
ಭೂವರೇಣ್ಯನೆ ಲಾಲಿಸಿಂತು ರ |
ಮಾವರನ ನೇಮದಲಿ ಮೆರೆವ ದ |
ಶಾವತಾರದ ಮೇಳ ಪೊರಟುದು ಭದ್ರನಾಜ್ಞೆಯಲಿ ||
ಭಾವಜಾದಿಗಳೆಲ್ಲರೈತರೆ |
ಠೀವಿಯಲಿ ಹಂಸಿಯು ತೆರಳಿದಳು |
ದೇವರಿಪು ಖಳ ವಜ್ರನಾಭಗೆ ತಿಳುಹೆ ವಾರ್ತೆಗಳ || 120 ||

**ಸೌರಾಷ್ಟ್ರ - ತ್ರಿವುಡೆ**
ಮೆರೆವ ಹಂಸಿಯ ಹದನ ಸುತೆಯಿಂ |
ದರಿತು ಹರುಷದಿ ವಜ್ರನಾಭನು |
ಕರೆಸಿದನು ಶುಚಿಮುಖಿಯ ಬಂದವ | ಳೆರಗೆ ಪದಕೆ || 121 ||

ಚದುರೆ ಬಾ ಬಾ ಹಂಸಿ ನೀ ಕೋ |
ವಿದೆ ತ್ರಿಜಗದಿ ಸಂಚರಿಸುತೀ |
ರ್ಪುದನರಿತೆ ಪೊಸ ವಾರ್ತೆ ಪೇಳರಿ | ತದನು ಮುದದಿ || 122 ||

ದೈತ್ಯಪತಿ ಲಾಲಿಪುದು ಭಾಗವ |
ತೋತ್ತಮನಿಹನು ಭದ್ರನೆಂಬವ |
ನೃತ್ಯ ಕಲೆಯಲಿ ಮೆಚ್ಚಿಸುತಿಹ ಸ | ಮಸ್ತ ಜಗವ || 123 ||

ಪೇಳಲೇನು ದಶಾವತಾರದ |
ಮೇಳದಿಂದ ಪುರಾಣ ಕಥೆಗಳ |
ಲೀಲೆಯಿಂದಾಡಿಸುವ ಸೊಬಗನೆ | ಕೇಳಿ ದನುಜ || 124 ||

ತಳೆದು ಹರುಷವ ನುಡಿದನಾಕೆಗೆ |
ಕಳುಹಿಸಾತನ ನಮ್ಮ ರಾಜ್ಯಕೆ |
ಚಲುವಿನಾಟವ ನೋಡಿ ಸಂತಸ | ಗೊಳಲಿ ಜನರು || 125 ||

ಎಂದ ಮಾತನು ಕೇಳಿ ತಾ ಕರೆ |
ತಂದಳಾ ಭದ್ರಾದಿಗಳ ದೈ |
ತ್ಯೇಂದ್ರನೆಡೆಗೆಲ್ಲವರ ಮನ್ನಿಸಿ | ಚಂದದಿಂದ || 126 ||

**ಭಾಮಿನಿ**

ಸುತ್ತಿ ಭೂಲೋಕವನು ನಿಮ್ಮಯ |
ನೃತ್ಯದಿಂದಭಿನಯಿಸುತ ಪುರಾ |
ಣೋಕ್ತ ಕತೆಗಳ ಕೀರ್ತಿ ತಳೆದವರೆಂದೆನುವ ನಿಮ್ಮ ||
ವಾರ್ತೆಗಳ ನಾ ಕೇಳಿ ಮೇಳವ |
ನಿತ್ತ ಬರಿಸಿದೆ ನಮ್ಮ ಪುರದಿ ಸ |
ಮಸ್ತರಿಗೆ ತೋರುವದರನ್ನೆನೆ ಭದ್ರನಿಂತೆಂದ || 127 ||

**ಮೇಚು ಕಲ್ಯಾಣಿ - ಅಷ್ಟ**

ದನುಜ ತಿಲಕನೆ ವಜ್ರನಾಭಾಖ್ಯ | ಪೊಗಳುವರೆ ನಿನ್ನಯ |
ಗುಣಗಳನು ಫಣಿರಾಜನಿಗಶಕ್ಯ ||
ಇನಿತು ಶಾರದೆಯೊಲುಮೆಯಲಿ ನ |
ರ್ತನವ ಗಾಯನ ಸಹಿತ ಕಲಿತದ |
ಜನಪದದಲಿ ಪುರಾಣ ಕಥೆಗಳ |
ನನುಸರಿಸುತಭಿನಯದಿ ಬಣ್ಣಿಪೆ || 128 ||

ಭದ್ರನೆನುತಲೆ ಕರೆಯುತಿಹರೆಲ್ಲ | ನಾ ಕೂಡಿಕೊಂಡು ಪ್ರ |
ಸಿದ್ಧರಾಗಿಹ ವೇಷಧಾರಿಗಳ |
ಬರ್ದಿಲರೊಡೆಯನಲ್ಲಿ ಪ್ರಕಟಿಸೆ |
ವಿದ್ಯೆಯನು ಪೋದಡವ ಶಿರಕೇ |
ರಿರ್ದ ಗರ್ವದಿ ಜರೆದ ನಮ್ಮನು |
ಬುದ್ಧಿಹೀನರ ತೆರದಿ ಮಘವನು || 129 ||

ತಾಳಿದಪಮಾನವನು ಕಳೆಯುವರೆ | ತವ ರಾಜ್ಯದೊಳಗನು |
ಕೂಲವಾಯ್ತೀ ತೆರದಿ ಕೃಪೆದೋರೆ ||
ಲೀಲೆಯಿಂದಭಿನಯಿಸುವೆವು ನಾವ್ |
ಮೇಲೆನಿಪ ರಾಮಾಯಣವ ಜನ |
ಜಾಲ ಮೆಚ್ಚುವ ತೆರದೊಳಾಜ್ಞೆಯ |
ಪಾಲಿಸೆಮಗೆಂದೆನುತ ನಮಿಸಿದ || 130 ||

**ಭಾಮಿನಿ**

ನಿಂದಿಸಿದನೇ ನಿಮ್ಮ ಮದದಿ ಮ |
ಹೇಂದ್ರನಾ ಗಣಿಕೆಯರ ನರ್ತನ |
ದಿಂದ ನಲಿವವ ಹೊರತು ವಿದ್ವಜ್ಜನರ ಕೌಶಲವ ||
ಮಂದಮತಿಯೇನರಿವ ನಮಗಾ |
ನಂದಗೊಳಿಸಿದಡುಡುಗರೆಗಳಲಿ |
ಚಂದದಲಿ ಮನ್ನಿಸುವೆನೆಂದನು ವಜ್ರನಾಭಾಖ್ಯ || 131 ||

**ವಾರ್ಧಕ**
ಉತ್ತಮ ಬಿಡಾರಗಳನಿತ್ತು ವಿಧವಿಧದಿ ನೆರೆ |
ಸತ್ಕರಿಸಿದನು ಸಕಲ ವೇಷಧಾರಿಗಳ ರಂ |
ಗಸ್ಥಳವ ರಚಿಸಿ ನವರತ್ನ ಕೆತ್ತನೆಗಳಲಿ ದೈತ್ಯೇಶನಾಜ್ಞೆಯಿಂದ ||
ಮುತ್ತಿದರು ದಾನವರು ಭದ್ರನಾಟವನು ಕಾಂ |
ಬತ್ತಿಯಲಿ ಬೊಂಬಾಳ ದೀವಿಗೆಯ ಸೊಬಗಿಂದ |
ರಾತ್ರಿಯಲಿ ಪ್ರಾರಂಭಿಸಿದನು ರಾಮಾಯಣದಿ ರಂಭಾಭಿಸಾರ ಕಥೆಯ || 132 ||

**ಭಾಮಿನಿ**
ಶೂರನಿಗೆ ರಾವಣನ ಪಾತ್ರ ಕು |
ಬೇರಸುತ ಮನ್ಮಥನು ಅಪ್ಸರ |
ನಾರಿ ರಂಭೆ ಮನೋವತಿಗೆ ಎಂದೆನುತ ವಿಂಗಡಿಸಿ ||
ಭೂರಿಯಾದವರುಗಳ ಭದ್ರನು |
ವಾರಣಾಸ್ಯನ ನುತಿಸಿ ಮೊದಲಲಿ |
ಶಾರದೆಯ ಸ್ಮರಿಸುತ್ತ ಪ್ರಾರಂಭಿಸಿದನಾಟವನು || 133 ||

**ಸೌರಾಷ್ಟ್ರ - ತ್ರಿವುಡೆ**
ದುರುಳ ರಾವಣ ತಪದಿ ವಾಣೀ |
ವರನ ಮೆಚ್ಚಿಸಿ ಪಡೆದು ವರಗಳ |
ಮೆರೆವ ಲಂಕಾಪುರವ ತಾ ವಶ | ಕರಿಸಿಕೊಂಡು || 134 ||

ಧನಪತಿಯ ಪುಷ್ಪಕವ ಸಹಿತಲೆ |
ಅನಿಮಿಷಾಧಿಪ ಮುಖ್ಯರ ರಣಾಂ |
ಗಣದಿ ಸದೆಬಡಿಯುತ್ತ ಖಳ ಮೇ | ದಿನಿಪರನ್ನು || 135 ||

ನುಗ್ಗರಿದು ವಿಕ್ರಮದಿ ದಶಶಿರ |
ಭರ್ಗನನು ತಾ ನುತಿಸುತಾತನ |
ನುಗ್ರಹವ ಪಡೆಯುತ್ತ ಬಂದವ | ಶೀಘ್ರದಿಂದ || 136 ||

ನಿಳಯಕೈದುವೆನೆನುತ ಬರುತಿರೆ |
ತಳುವದಾ ರವಿ ಪಶ್ಚಿಮಾಂಬುಧಿ |
ಗಿಳಿಯೆ ನಿಶಿಯನು ಕಳೆಯೆ ಪಥದಲಿ | ಕುಳಿತಿರಲ್ಕೆ || 137 ||

**ಬೇಗಡೆ - ಅಷ್ಟ**
ನಡೆತಂದಳಾಕ್ಷಣ ರಂಭೆ | ಕಡು |
ಬೆಡಗಿನೊಳೀಕ್ಷಿಸೆ ಪುತ್ಥಳಿ ಬೊಂಬೆ ||
ಸಡಗರದಲಿ ಪಥದೊಳಗೆ | ಕೂಡಿ |
ಕುಡುವಿಲ್ಲನಾಟದಿ ಸುಖಿಸುವ ಬಗೆಗೆ || 138 ||

ನಳಕೂಬರನ ಬಳಿಗೆಂದು | ಭರ |
ದೊಳು ಕಂಡು ದಶಮುಖನಾಕೆಯನಂದು ||
ತಳೆದ ಮಾರನ ಹತಿಯಿಂದ | ಕಳ |
ವಳಿಸಿ ಬಂದಾ ವಾರಸತಿಯೊಡನೆಂದ || 139 ||

**ಸುರುಟಿ - ಏಕ**
ಚಂದ್ರಾನನೆ ಬಾರೆ | ನೀನ್ಯಾ | ರೆಂದು ಮುದದಿ ಪೇಳೆ ||
ಕಂದರ್ಪನ ಸತಿ | ಯಂದದಿ ಮೆರೆಯುವ |
ಸುಂದರಾಂಗಿ ಸುಮಗಂಧಿನಿ ಕೋಮಲೆ || 140 ||

ಎತ್ತಗಮನ ಚಿನ್ನ | ನೋಡಲು | ರಾತ್ರಿ ವೇಳೆ ನಿನ್ನ ||
ಚಿತ್ತಜನಸ್ತ್ರಕೆ | ತುತ್ತಾದೆನು ತೋ |
ರುತ್ತ ದಯವ ಸುಖ | ವಿತ್ತು ನೀ ರಕ್ಷಿಸು || 141 ||

ಲಂಕಾಧೀಶ್ವರನು | ತ್ರಿದಶರ | ಬಿಂಕವ ಮುರಿದಿಹೆನು ||
ಶಂಕರನೊಲುಮೆಯ | ಪಡೆದಿಹೆ ಮನದೊಳು |
ಶಂಕಿಸದಿರು ಮೀ | ನಾಂಕ ಸನ್ನಿಭನು || 142 ||

ದನುಜನ ನುಡಿ ಕೇಳಿ | ವನಿತಾ | ಮಣಿಯು ಭೀತಿ ತಾಳಿ ||
ಮನದಲಿ ಧೈರ್ಯವ | ಧರಿಸುತ ಬಳಿಕತಿ |
ವಿನಯದೊಳಾ ದಶಾ | ನನಗೆ ಪೇಳಿದಳು || 143 ||

**ಶಂಕರಾಭರಣ - ಅಷ್ಟ**

ತರವಲ್ಲ | ದೈತ್ಯರೆರೆಯನೆ ನಿನಗಿದು | ತರವಲ್ಲ || ಪಲ್ಲ ||
ತರವಲ್ಲ ನಿನಗಿಂತ ಮಾತು | ನೋಡು |
ವರಧರ್ಮಾಚರಣೆಯನರಿತು || ಪರ |
ತರುಣಿಯರಿಗೆ ಮನಸೋತು | ಇಹ |
ಪರ ಸುಖಗಳ ನೀಗಿ | ನರಕ ಯಾತನೆಯಲಿ |
ಹೊರಳುವದನುದಿನ | ಅರಿಯದಾತನೆ ನೀನು || 144 ||

ಅನಿಮಿಷಪುರದೊಳಗಿರುವ | ರಂಭೆ |
ಎನುವ ಪೆಸರಿನಿಂದ ಮೆರೆವ || ಸತಿ |
ಗಣಿಕೆಯಾದರು ಕೇಳು ನಿಜವ | ಧನ |
ಪನ ಸುತ ನಳಕೂಬ | ರನಿಗೆ ಸೇರಿರ್ಪನೀ |
ದಿನಕೆ ನೋಡಲು ಪರ | ವನಿತೆಯಾಗಿರ್ಪನು || 145 ||

ನಳಕೂಬರನ ಭಯವೇಕೆ | ಸುರ |
ರಳುಕಿಹರೆನ್ನ ವಿಕ್ರಮಕೆ || ಮುದ |
ತಳೆದು ನೀ ಸಲಿಸೆನ್ನ ಬಯಕೆ | ಪರ |
ಲಲನೆಯರನು ಕಂಡು | ಕಳೆವರೆ ವಿಟರಿನ್ನು |
ಚೆಲುವೆ ಬಾ ಹರುಷದಿ | ನಳಿನದಳಾಂಬಕಿ || 146 ||

ಧನಪ ನಿನ್ನಣ್ಣನಾಗಿಹನು | ಆತ |
ನಣುಗನು ನಳಕೂಬರನು || ನಿನ್ನ |
ತನುಜನಂತಿಹ ನೋಡು ನೀನು | ಇಂದು |
ನಿನಗೆ ನಾ ಸೊಸೆಯಾದೆ | ನೆನುವದ ಬಗೆಯದೆ |
ಮನ ಮಾಳ್ಪುದುಚಿತವೆ | ದನುಜಕುಲಾಗ್ರಣಿ || 147 ||

ಅನುಜ ತನುಜರೆಂಬ ಭೇದ | ಇಲ್ಲ |
ಗಣಿಕೆಯರಿಗೆ ಬಿಡು ವಾದ || ಎನ್ನ |
ಮನವು ನಿನ್ನಾಧೀನವಾದ | ಮೇಲೆ |
ಕ್ಷಣ ತಾಳಲಾರೆನೆಂ | ದೆನುತ ಪಿಡಿದು ಸತಿ |
ಯನು ಬಲಾತ್ಕಾರದಿ | ದನುಜನು ಕೂಡಿದ || 148 ||

**ವಾರ್ಧಕ**
ನೊಂದು ದನುಜನ ಬಲಾತ್ಕಾರದಿಂದವನ ಕೈ |
ಯಿಂದ ತಪ್ಪಿಸಿಕೊಂಡು ಕಳವಳಿಸಿ ಬಲು ಭೀತಿ |
ಹೊಂದಿ ಕಣ್ಣೀರ ಸುರಿಸುತ್ತಲೈತಂದಳಾ ವೈಶ್ರವಣನಣುಗನೆಡೆಗೆ ||
ಕುಂದಿದಾನನವು ಕಡಿದಾಭರಣಗಳ ಕಂಗ |
ಳಿಂದಿಳಿವ ಜಲಗಳಂ ಕಂಡು ನಳಕೂಬರನು |
ನೊಂದಳೇಕೆನುತ ಕೌತುಕ ತಾಳಿ ರಂಭೆಯಲಿ ಕಡು ಮೋಹದಿಂದ ನುಡಿದ || 149 ||

**ಜಂಜೂಟಿ - ಏಕ**
ತುಂಬಿಗುರುಳೆ ವರ | ಕಂಬುಕಂಠಿನಿ |
ಬಿಂಬಾಧರೆ ರಂಭೆ ||
ತುಂಬಿ ಜಲವ ನಯ | ನಾಂಬುಜದಲಿ ನೀ |
ಹಂಬಲಿಸುವದೇ | ನೆಂಬುದರಿಯೆನೆ || 150 ||

ವಿಕಸಿತಾಬ್ಜ ಸುಮ | ಮುಖಿ ನಿನ್ನಯ ಕಂ |
ಚುಕವು ಹರಿದುದೇನು ||
ಅಕಟ ಕಮಲ ಕೋ | ರಕನಿಭ ಕುಚದಲಿ |
ರಕುತ ಸುರಿವುದೇ | ನು ಕುಟಿಲತನವಿದು || 151 ||

ಕುಸುಮಗಂಧಿ ನಿ | ನ್ನೊಸಲ ಕುಂಕುಮವು |
ಪಸರಿಸಿರುವದಲ್ಲೆ ||
ನಿಶಿಯೊಳಾದುದ | ನ್ನುಸುರೆಲ್ಲವ ವಂ |
ಚಿಸದೆನ್ನೊಳು ಬಿಡು | ವ್ಯಸನವೆಂದಡೆ || 152 ||

**ತೋಡಿ - ಏಕ**
ಏನ ಪೇಳಲಿ ನಿನಗೆ | ಮುಖವನೆಂತು |
ಕಾಣಿಸಲಿನ್ನು ಧರೆಗೆ ||
ಮಾನಿನಿಯರ ರೂಪವು | ಸ್ತ್ರೀಯರ ಮಾನ |
ಹಾನಿಗೆ ಕಾರಣವು || 153 ||

ಬರುವೆನು ನಿಶಿಯೊಳೆಂದು | ನಿನ್ನೊಡನೆ ನಾ |
ನೊರೆದಿರ್ದ ತೆರದೊಳಿಂದು ||
ಹರುಷದಿ ಬರುತಿರಲು | ಲಂಕೇಶ ದಶ |
ಶಿರ ಕಂಡು ಮೋಹದೊಳು || 154 ||

ನುಡಿದ ನೀತಿಯ ಕೇಳದೆ | ಖಳನನ್ಯರ |
ಮಡದಿಯೆಂಬುದ ನೋಡದೆ |
ಪಿಡಿದು ಬಲಾತ್ಕಾರದಿ | ಭೋಗಿಸುತೆನ್ನ |
ಕೆಡಿಸಿದನೀ ದಿನದಿ || 155 ||

**ಮಾರವಿ - ಏಕ**
ತರುಣಿಯ ಪರಿಭವ ಲಾಲಿಸಿ ನಳಕೂ |
ಬರನತಿ ರೋಷದಲಿ ||
ಸರಸಿಜಮುಖಿ ಸೈರಿಸು ಶೋಕವ ದಶ |
ಶಿರನತಿ ಗರ್ವದಲಿ || 156 ||

ಪರಸತಿ ಎಂಬುದ ಮರೆಯುತ ಖಳ ಬಲಾ |
ತ್ಕರಿಸುತ ಕೆಡಿಸಿದನೆ ||
ಸುರನರರನು ಮದದಿ ಬಿಡೆ |
ದುರುಳನನೆಲೆ ಜಾಣೆ || 157 ||

ಧೂರ್ತನು ಮುಂದೆ ಬಲಾತ್ಕರಿಸಲು ನೆರೆ |
ಯತ್ನಿಸೆ ಸತಿಯರನು ||
ಮಸ್ತಕಗಳು ವರ ಪೃಥ್ವಿಗೆ ಕೆಡೆಯಲೆ |
ನುತ್ತಲೆ ಶಪಿಸಿದನು || 158 ||

**ಭಾಮಿನಿ**
ಖಳಗೆ ಶಾಪವನಿತ್ತು ಮೃದು ನುಡಿ |
ಗಳಲಿ ಸಂತೈಸಿದನು ಮೀರಿದ |
ಕೆಲಸವಿದಕಿನ್ನುತ್ತು ಮಾಡುವುದೇನೆನುತ ಸತಿಯ ||
ಬಳಿಕ ಕಳುಹಿಸುತವಳನಿರೆ ದಶ |
ಗಳನು ಲಂಕಾಪುರಿಗೆ ತೆರಳಿದ |
ಬಲಸಹಿತಲೆಂಬಲ್ಲಿಗಾದುದು ಕಥೆಗೆ ಮಂಗಲವು || 159 ||

**ಆರಭಿ - ತ್ರಿವುಡೆ**
ಕಂಡು ದಾನವರಾಟಗಳ ಭ್ರಮೆ |
ಗೊಂಡು ಪೇಳಿದಿರೀ ಸೊಬಗುಗಳ |
ಕಂಡವರು ಮೊದಲಿಲ್ಲವೀ ಭೂ | ಮಂಡಲದಲಿ || 160 ||

ಮಸ್ತಕವ ತೂಗಿಸಿದರಮಮಾ |
ನೃತ್ಯಕಲೆಯೊಳೆನುತ್ತ ತರಿಸುತ |
ಮುತ್ತು ರತ್ನಾದಿಗಳನುಚಿತಗ | ಳಿತ್ತರೆಲ್ಲ || 161 ||

ಭಾವಜನ ವೇಷವನು ಕಂಡು ಪ್ರ |
ಭಾವತಿಯು ಮನ ಸೋತಳಾತನ |
ಹಾವಭಾವಗಳಿಂಗೆ ವಿರಹದಿಂ | ದಾ ವನಿತೆಯು || 162 ||

ಬಳಲಿಹುದ ಕಾಣುತ್ತ ತರುಣಿಯ |
ಚೆಲುವಿಕೆಗೆ ಬೆಂಡಾಗಿ ಮೋಹದ |
ಬಲೆಗೆ ಸಿಲುಕುತ ಮದನ ನೆರೆ ಕಳ | ವಳಿಸುತಂದು || 163 ||

ಬಳಿಕ ಹಂಸಿಯೊಳೆಂದ ನಿಶಿಯಲಿ |
ಸೆಳೆದಳೆನ್ನುಯ ಚಿತ್ತ ನೇಮದಿ |
ಚಲುವೆಯಾದ ಪ್ರಭಾವತಿಯು ಎನ | ಗೊಲಿವ ತೆರದಿ || 164 ||

ಯತ್ನವನು ಗೈದುಳುಹು ಹರಣವೆ |
ನುತ್ತ ಪೇಳಲು ಸಂತವಿಸುತಲೆ |
ಚಿತ್ತಜನ ಶುಚಿಮುಖಿಯು ಹೊರಟಳು | ಉತ್ಸಾಹದಲಿ || 165 ||

**ಮೋಹನ - ಅಷ್ಟ**
ಹರಿತಂದು ಹರ್ಮ್ಯದಿ ವಿರಹ ಸಂತಾಪದೊ |
ಳಿರುವ ಪ್ರಭಾವತಿಯ ||
ಪರಿಕಿಸಿ ನುಡಿದಳೀಪರಿಯ ಬೇಸರ ತಳೆ |
ದಿರುವದೇನಾ ಬಗೆಯ || 166 ||

ತಿಳುಹೆನಲೇನ ಪೇಳಲಿ ಕಂಡು ನಿನ್ನೆ ನಾ |
ನಳಕೂಬರನ ವೇಷದ ||
ಚಲುವಿನ ರೂಪಿಗೆ ಸಿಲುಕಿದೆ ಮೋದದಿ |
ಸಲಿಸು ಬಯಕೆಯನೊಂದ || 167 ||

ನಿನ್ನ ಹೊರತು ಯತ್ನವನ್ನು ಗೈವರ ಕಾಣೆ |
ನನ್ಯರು ತಿಳಿಯದಂತೆ ||
ಎನ್ನೆಡೆಗಾಮರರನ್ನು ಬರಿಸಿ ಸಲ |
ಹಿನ್ನು ನೀ ಸುಗುಣವಂತೆ || 168 ||

ನೀರಜಮುಖಿ ನಿನ್ನ ಸೇರಿ ಸುಖಿಸೆ ವೇಷ |
ಧಾರಿಯಾಗುತ ಬಂದನು ||
ಈ ರೀತಿ ಮನಸಿಜ ಸೈರಿಸು ಶೋಕವ |
ನಾರಿ ನಾ ಕರೆತಹೆನು || 169 ||

ಎಂದು ಸಂತೈಸುತ್ತ ಬಂದಾಗ ಸುಮಶರ |
ಗೆಂದಳು ತೋಷದಲಿ ||
ನೊಂದಿರುವಳು ಸುಮಗಂಧಿನಿಯನು ವರಿ |
ಸಿಂದು ನೀ ಸಂತಸದಿ || 170 ||

ತುಂಬಿಯಾಕಾರದಿ ಶಾಂಭರಿ ವಿದ್ಯದಿ |
ಅಂಬುಜಮುಖಿ ಬಳಿಗೆ ||
ಶಂಬರರಿಪು ನಡೆತಂದನು ದೈತ್ಯ ಕ |
ದಂಬವರಿಯದ ಹಾಗೆ || 171 ||

**ಆರಭಿ - ರೂಪಕ**

ಬಂದು ಹರ್ಮ್ಯಕೆ ತಳೆ | ದಂದು ನಿಜವ ನೆರೆ |
ಕಂದರ್ಪ ತೇಜದಿಂದ ||
ಸುಂದರಾಂಗಿಯು ಕಂಡು | ಪೊಂದಿ ಮುದವ ನಾಚಿ |
ನಿಂದು ಶಿರವನು ತಗ್ಗಿಸುತ || 172 ||

ಕಿರುನಗೆಯನು ಬೀರಿ | ಧರೆಯ ಗೀಚುತಲಿರೆ |
ಸ್ಮರನೆಂದ ನಾಚುವುದೇಕೆ ||
ತರುಣಿಮಣಿಯೆ ನಿನ್ನ | ಅರೆನೋಟವೆಂದೆಂಬ |
ಶರವನೆಸೆಯುತ ಯೆನ್ನುರಕೆ || 173 ||

ವಶ ಕೆಡಿಸಲು ಬಂದೆ | ಶಶಿಮುಖಿ ಎನ್ನ ವ |
ರಿಸಿ ಪ್ರೇಮದಿಂದೊಡಗೂಡು ||
ರಸಿಕತನದಿ ಬಳ | ಲಿಸ ಬೇಡ ಸುಮ್ಮನೆ |
ಬಿಸಜಗಂಧಿನಿ ಮನಮಾಡು || 174 ||

ಮುನಿಪ ನಾರದ ಹಿಂದೆ | ಜನಕನಾಸ್ಥಾನದಿ |
ಮನಸಿಜ ನಿನ್ನ ಗುಣಗಳ ||
ಘನತೇಜ ಪೇಳಿದ | ದಿನದಿಂದ ಸ್ಮರಿಸುತ್ತ |
ಮನದೊಳಿರ್ದನು ದಿನವೆಲ್ಲ || 175 ||

ಅಚಲವಾಯಿತು ಪ್ರೇಮ | ಶುಚಿಮುಖಿ ಹಂಸೆಯ |
ವಚನ ಕೌಶಲದಿಂದಲಂದು ||
ಪ್ರಚುರಳಿಗೆಣೆಗಾಣೆ | ಖಚಿತವೀ ಧರೆಯೊಳು |
ಸುಚರಿತೆಯನ್ನು ಮನ್ನಿಪುದು || 176 ||

ಎಂದುರೆ ಮನ್ನಿಸು | ತಂದು ಹಂಸಿಯನಾಗ |
ಗಾಂಧರ್ವ ವಿಧಿಯಿಂದ ವರಿಸಿ ||
ಸುಂದರಿಯನು ಮುದ | ದಿಂದಿರ್ದ ದೈತ್ಯನ |
ಮಂದಿರದಲಿ ಸುಖವೆರಸಿ || 177 ||

**ಭಾಮಿನಿ**
ಇಂದುವದನೆ ಪ್ರಭಾವತಿಯು ಅರ |
ವಿಂದಸಾಯಕನೊಡನೆ ರತಿ ಸುಖ |
ದಿಂದಿರಲು ಮುದದಿಂ ಸುನಾಭನಸುತೆಯರಾಗಿರುವ ||
ಚಂದ್ರವತಿ ಗುಣವತಿಯರೊಡನೈ |
ತಂದು ಪಂಚಶರನನು ಕಾಣುತ |
ಲೆಂದರತಿ ಕೌತುಕದಿ ಮಣಿದಗ್ರಜೆಯೊಳೀ ತೆರದಿ || 178 ||

**ಸಾವೇರಿ - ಅಷ್ಟ**
ಅಕ್ಕ ಪೇಳಿದೇನು ಚೋದ್ಯ | ಹದನವಿದು |
ಮುಕ್ಕಣ್ಣ ಶಿವಗೆ ವೇದ್ಯ ||
ಅರ್ಕನ ತೇಜವ | ಮಿಕ್ಕಿ ಮೆರೆವ ಚಲುವ |
ಪಕ್ಕದಿ ಕುಳಿತಿರುವ | ತಿಳಿಯೆ ನಿಜವ || 179 ||

ಪರಿಣಯವೆಸಗಲಿಲ್ಲ | ನಿನ್ನಯ್ಯನೀ |
ವರೆಗೆ ನಾವರಿತುದಿಲ್ಲ ||
ಪರಮಸುಂದರ ನಿಂತು | ದೊರಕಿದ ನಿನಗೆಂತು |
ಒರೆಯಬೇಕೆಮಗದನು | ನಿಶ್ಚಯವನು || 180 ||

ಮನಕೊಪ್ಪಿದಾತನನು | ವರಿಸುವಡೆ |
ಮುನಿವರ ದುರ್ವಾಸನು ||
ಎನಗಿತ್ತ ಮಂತ್ರೋಪ | ದೇಶದಿ ಬರಿಸಿದೆ |
ಮನಸಿಜನೀತನನು | ವರಿಸಿದೆನು || 181 ||

ಭಾವನೀ ಮಹಿಮನೆಂದು | ವಂದಿಸುತಲೆ |
ಭಾವಜಗೀರ್ವರಂದು ||
ನೀ ವಲಿದೆಮಗೆ ಕೊ | ಟ್ಟಾ ಮಹಾಮಂತ್ರವ |
ಕಾವುದಿತ್ತೆಮ್ಮ ಮನ | ಕೊಪ್ಪುವ ವರನ || 182 ||

ದುಷ್ಟರು ದಾನವರು | ನಿರತ ಸತ್ಯ |
ಭ್ರಷ್ಟರು ಡಾಂಭಿಕರು ||
ಕೆಟ್ಟು ಪೋಪರು ನಮ್ಮ | ದುಷ್ಕರ್ಮದಿಂ ಮೋಹ |
ಹುಟ್ಟಿದು ದೈತ್ಯರೊಳು | ವರಿಸಿಕೊಳಲು || 183 ||

ದೇವತಾಂಶದಿ ಹುಟ್ಟಿದ | ಗುಣದಿ ನಮ್ಮ |
ಭಾವನ ಸಮ ರೂಪದ ||
ಕೋವಿದನೊಲಿವಂತೆ | ಮಾಡೆಂದು ಭರದಿ ಪ್ರ |
ಭಾವತಿಗೆರಗಿದರು | ಅವರಿಬ್ಬರು || 184 ||

**ಹಂಸಧ್ವನಿ - ರೂಪಕ**
ಮನಸಿಜನಡಿಯೊಳು ಮಣಿದು ಬಿನ್ನೈಸಲು |
ವನಿತೆ ಪ್ರಭಾವತಿಯಾಗ ||
ಸನುಮತದಿಂ ಹಂಸಿಯನು ಕರೆದೆಂದ ನೀ |
ಕ್ಷಣ ಗದ ಸಾಂಬರ ಬೇಗ || 185 ||

ಕರೆತಂದು ಮಾಯದಿ ತರುಣಿಯರಿಷ್ಟಾರ್ಥ |
ಪರಿಪೂರ್ಣಗೊಳಿಸೆನೆ ಮದನ ||
ಪೊರಟಾಗಳೀರ್ವರ ಕರೆದು ತಂದಳು ದೈತ್ಯ |
ರರಿಯದ ತೆರದಿಂದ ಹದನ || 186 ||

ಚಂದ್ರವತಿಯ ಮುದದಿಂದ ವರಿಸೆ ಗದ |
ನಂದು ತರುಣಿ ಗುಣವತಿಯ ||
ಚಂದದಿ ಸಾಂಬನು ಗಾಂಧರ್ವ ವಿಧಿಯೊಳಾ |
ನಂದದಿ ವರಿಸಿದ ಸತಿಯ || 187 ||

ಇರುತಿರೆ ಮುದದಲಿ ಸ್ಮರಕೇಳಿಯಿಂದಲಿ |
ಧರಿಸಿ ಮೂವರು ಗರ್ಭಗಳನು ||
ನೆರೆ ನವಮಾಸವು | ಭರಿತವಾಗಲು ತರ |
ಳರನು ಪೆತ್ತರು ಮೂವರನು || 188 ||

**ವಾರ್ಧಕ**
ಮದನಾತ್ಮಜನನಿರುದ್ಧ ಚಂದ್ರಪ್ರಭನು |
ಗದನ ಕುವರನು ಸಾಂಬನಣುಗ ಗುಣವಂತನೀ |
ವಿಧದಿ ಪೆಸರಿರಿಸಿ ಹಂಸಿಯ ಮುಖದಿ ವಾರ್ತೆಯನು ಅರುಹಲತಿ ಸಂತೋಷದಿ ||
ಪದುಮಜಪಿತಂ ಬಾಲಕರು ಪುಟ್ಟಿದಾಕ್ಷಣದಿ |
ಒದಗಿ ಯೌವನ ಸಕಲಶಾಸ್ತ್ರಾಸ್ತ್ರ ಕೋ |
ವಿದರಾಗಿ ಮೆರೆಯಲೆಂದಿತ್ತನಾ ವರಗಳನು ಭುಜಬಲದಿ ರಂಜಿಸಿದರು || 189 ||

**ಕಂದ**
ತರಳರು ಹರ್ಮ್ಯದೊಳೀಪರಿ |
ಮೆರೆವುದ ಗಗನದಲಿ ನಿಂದು ಪುರ ರಕ್ಷಣೆಯಂ ||
ವಿರಚಿಪ ದೈತ್ಯರು ಕಾಣುತ |
ತರಹರಿಸುತ ಬಂದು ವಜ್ರನಾಭಗೆ ಪೇಳ್ದರ್ || 190 ||

**ಮುಖಾರಿ - ಏಕ**
ಲಾಲಿಸು ವಜ್ರನಾಭ ದೊರೆಯೆ | ಸೌಭಾಗ್ಯದ ಸಿರಿಯೆ |
ಜಾಲವಲ್ಲಿದು ಕಂಡುದನೊರೆಯೆ ||
ನಾಲಿಗೆ ತಡವರಿಸುತಿಹುದು ಕೀರ್ತಿ ವಿ |
ಶಾಲನೆ ನಿನ್ನಯ ಬಾಳುವೆ ಕೆಟ್ಟಿತು || 191 ||

ದಿತಿಜಾತ ನಿಮ್ಮ ಹರ್ಮ್ಯದ ಮೇಗೆ | ನಿನ್ನಣುಗೆಯು ಪ್ರಭಾ |
ವತಿ ಚಂದ್ರವತಿ ಗುಣವತಿಯರಿಗೆ ||
ಸುತರಿರ್ಪರು ಮೂವರು ನಲಿದಾಡುತ |
ಅತುಳವಿಕ್ರಮರು ನೋಡಿದರಿನ್ನಾ |
ಸತಿಯರು ಕುವರರನೆಂತು ಪಡೆದರಾ |
ಸ್ಥಿತಿಯನ್ನರಿಯೆವು ಮತಿಯುತ ಲಾಲಿಸು || 192 ||

ಪೇಳುವ ಮಾತು ಸಟೆಯಲ್ಲ | ಕಳುಹಿಸಿ ಬೇರೆ |
ಊಳಿಗದವರ ಶೋಧಿಪುದೆಲ್ಲ ||
ಜಾಲವಿದಾದರೆ ಸೀಳಿಸಿ ನಾಲಗೆ |
ಶೂಲವನೇರಿಸು ನಮ್ಮನೆನುತ್ತಲೆ |
ಪೇಳಿದರಾಕ್ಷಣ ಕಾಲಿಗೆ ಮಣಿದು || 193 ||

**ಸೌರಾಷ್ಟ್ರ - ತ್ರಿವುಡೆ**
ಉರಿಯನುಗುಳುತ ಚರರ ವಚನದಿ |
ದುರುಳನಾರ್ಭಟಿಸುತ್ತಲೆಂದನು |
ಆರರೆ ಮಾನವ ತೊರೆದು ಸುತೆಯರು | ಪರಪುರುಷರ || 194 ||

ಒಡಗೊಳುತ ವೇಶ್ಯೆಯರ ತೆರದಲಿ |
ಪಡೆದು ಮಕ್ಕಳನೆನ್ನ ಕೀರ್ತಿಯ ||
ಮಡುವಿಗಿಕ್ಕಿದರಮಮ ಸುತೆಯರ | ಬಿಡುವನಲ್ಲ || 195 ||

ನಡೆಯಿರೋ ತರಳೆಯರ ಹೆಡೆಮುಡಿ |
ಪಿಡಿದು ಬಂಧಿಸುತವರ ಕೂಡಿದ |
ದಡಿಗರನ್ನೆಳೆತನ್ನಿರೆನುತಲೆ | ನುಡಿದನಾಗ || 196 ||

**ವಾರ್ಧಕ (ಅರ್ಧ)**
ದೈತ್ಯನಾಜ್ಞೆಯೊಳಾರ್ಭಟಿಸುತ ಶಸ್ತ್ರಾಸ್ತ್ರದಲಿ |
ಸುತ್ತ ಬಹ ದುರಳರನು ಕಂಡು ಭಯದಿಂದ ನಡು |
ಗುತ್ತ ಪ್ರಭಾವತಿಯು ಪಂಚಬಾಣನ ಚರಣಕೆರಗುತ್ತಲಿಂತೆಂದಳು || 197 ||

**ಸಾವೇರಿ - ಏಕ**
ಕಾಂತ ನೀ ನೋಡಿದೆಯ | ಗರ್ಜಿಸಿ ಬರು |
ವಂಥ ದೈತ್ಯರ ಪಡೆಯ ||
ಎಂತಾದರೆಮ್ಮ ಕಾರ್ಯ | ಬಹಿರಂಗವಾ |
ದಂತಿದೆ ನೋಡೆ ನಿಶ್ಚಯ || 198 ||

ಉಳಿಯಗೊಡರು ನಮ್ಮನು | ಯತ್ನವ ಕಾಣೆ |
ಅಳಿಸಿ ದೈತ್ಯೇಯರನು ||
ಸಲಹುವರಾರು ಮಕ್ಕಳ | ಅತ್ತೆ ಮಾವಂದ್ಯ |
ರೊಲಿದೊಮ್ಮೆ ನೋಡಲಿಲ್ಲ || 199 ||

ಮುನಿ ದೂರ್ವಾಸನು ಪೂರ್ವದಿ | ವೈಧವ್ಯವಿ |
ಲ್ಲೆನುತ ಇತ್ತಿಹ ವರದಿ ||
ಇನಿಯ ನೀನಾದೆ ರಣದಿ | ದುಷ್ಟರ ಕೊಂದೆ |
ಮ್ಮನು ಸಲಹೈ ದಯದಿ || 200 ||

**ಮೋಹನ - ಏಕ**
ಮಡದೀಮಣಿ ನೀನು | ಶೋಕವ |
ಬಿಡು ಮನದೊಳಗಿನ್ನು ||
ದಡಿಗ ದೈತ್ಯರನು | ಮಡುಹಿ ಕುವರರನು |
ದೃಢದಲಿ ಪೊರೆಯುವೆ | ಜಡಜದಳಾಂಬಕಿ || 201 ||

ಮುರಹರ ತಂತ್ರದೊಳು | ಸತಿಪುರು |
ಷರು ನಾವಾಗಿರಲು ||
ಪರಿಯನರಿಯದೀ | ಪರಿ ದೈತ್ಯರು ನಡೆ |
ತರುತ ಸಂಗರದಿ | ಹರಣವನೀವರು || 202 ||

ಅಳಿಯನೆನುತಲೆನ್ನ | ಮನ್ನಿಸೆ |
ಸಲಹುವೆ ತವ ಪಿತನ ||
ಛಲವ ತೋರಿದರೆ | ಇಳೆಗೆ ಕೆಡಹುವೆನು |
ಉಳಿದು ಮೋಹ ಮಾ | ತುಳನಲಿ ಸಮರದಿ || 203 ||

ಎಂದ ಮಾತ ಕೇಳಿ | ತರುಣಿಯ |
ರಂದು ಹರುಷ ತಾಳಿ ||
ಕುಂದಣದಾರತಿ | ಎತ್ತಿ ಕಳುಹಿದರು |
ಚಂದದಿ ವಿಜಯವ | ಹೊಂದಿರೆನುತ್ತಲೆ || 204 ||

**ಭಾಮಿನಿ**

ಹರಿಯ ವರಬಲದಿಂದ ಭುಜಬಲ |
ಭರಿತರಾಗಿಹ ಬಾಲಕರ ಸತಿ |
ಯರನು ಸಂರಕ್ಷಿಸಲು ನೇಮಿಸಿ ಹಂಸಿಯೊಡನರುಹಿ ||
ಬರಿಸಿ ಯಾದವ ಸೈನ್ಯಗಳ ಮು |
ತ್ತಿರುವ ಖಳ ಭಟರನ್ನು ಕೆಡಹಲು |
ಚರರು ಭಯದಿಂ ಬಂದು ಪೇಳ್ದರು ವಜ್ರನಾಭನಿಗೆ || 205 ||

**ನಾದನಾಮಕ್ರಿಯೆ - ಅಷ್ಟ**

ದೈತ್ಯೇಶ ಲಾಲಿಸಯ್ಯ | ಕಾರ್ಯವು ವಿಪ |
ರೀತವಾಗಿಹುದು ಜೀಯ ||
ನೃತ್ಯದವರು ನಮ್ಮ | ಶತ್ರುಗಳವರಿಂತು |
ಕೃತಿಮದಲಿ ವಂಚಿ | ಸುತ್ತ ಪುರವ ಪೊಕ್ಕು || 206 ||

ತರಳೆಯರನು ವಂಚಿಸಿ | ಮನವ ವಶ |
ಕರಿಸುತವರ ವರಿಸಿ ||
ತರಳರ ಪಡೆಯುತ್ತ | ಮೆರೆವರು ಪಿಡಿಯಲ್ಕೆ |
ದರೆ ಭಂಗಿಸಿದರೆಮ್ಮ | ನೆರೆ ವಿಕ್ರಮರು ನೋಡೆ || 207 ||

**ಭಾಮಿನಿ**

ಚಾರಕರ ನುಡಿ ಕೇಳಿ ಪ್ರಳಯದ |
ಮಾರವೈರಿಯ ತೆರದಿ ಗರ್ಜಿಸಿ |
ದಾರಿಯಲಿ ಸಂಚರಿಪ ಮಾರಿಯ ತಂದು ಮಂದಿರವ ||
ಸೇರಿಸಿದ ತೆರನಾಯ್ತು ನರ್ತನ |
ಗಾರರನು ಬರಿಸಿದುದು ಬಗೆವೆನೆ |
ಮೂರು ಲೋಕವ ಹಿಂಡುವೆನೆನುತ್ತಲೆ ಪೊರಟ ಸಂಗರಕೆ || 208 ||

**ಪಂಚಾಗತಿ - ಮಟ್ಟೆ**

ದುರುಳ ವಜ್ರನಾಭನಿಂತು | ನೆರಹಿ ಚಾತುರ್ಬಲವನಂದು |
ಕರದಿ ಶಸ್ತ್ರಾಸ್ತ್ರಗಳನಂದು | ಧರಿಸಿ ಶೌರ್ಯದಿ ||
ಮೆರೆವ ದೈತ್ಯರುಗಳ ಸಹೋ | ದರ ಸುನಾಭ ಸಹಿತ ಯಾದ |
ವರನು ಮುತ್ತಿ ನಿಂದರಾಗ | ಧುರಕೆ ಕೋಪದಿ || 209 ||

ಚಿತ್ರಜಯ್ಯ ಹಂಸಿಯಿಂದ | ವರ್ತಮಾನವರಿತು ಬಳಿಕ |
ವೃತ್ರವೈರಿ ಮುಖ್ಯ ತ್ರಿದಶ | ಮೊತ್ತ ಸಹಿತವ ||
ದೈತ್ಯನಾಳ್ವ ಪುರಕೆ ಬಂದು | ಪುತ್ರನಿಗೆ ಬೆಂಬಲಕೆ ನಿಂದು |
ಚಿತ್ರಜನಿಗೆ ಖಳರ ವಧಿಸ | ಲಿತ್ತ ಚಕ್ರವ || 210 ||

ಜನಕನಡಿಗೆ ಮಣಿದು ಚಕ್ರ | ವನು ತಿರುಗಿಸಿ ಕರದೊಳಂದು |
ಮನಸಿಜನು ಮುಂದೊತ್ತಿ ಬರುವ | ದನುಜಸೇನೆಯ ||
ರಣದಿ ಕೊಚ್ಚಿ ಕೆಡಹೆ ಛಲದಿ | ಅನಿಮಿಷರನು ಕೂಡಿ ಭರದಿ |
ದನುಜನಾ ಸುನಾಭ ಕಂಡು | ಕನಲುತೆಂದನು || 211 ||

**ಭೈರವಿ - ಅಷ್ಟ**
ಭಳಿರೆಲೆ ನಾಟ್ಯಗಾರ | ಮೋಸದಿ ನಮ್ಮ |
ನಿಳಯವ ಪೊಕ್ಕು ಚೋರ ||
ಕಳವಿಲಿ ನಮ್ಮಯ | ಚೆಲುವೆ ಸುತೆಯರನು |
ಒಲಿಸಿಕೊಂಡಿಹೆಯ ಪೋರ || 212 ||

ಕಳವಿಲಿ ಬಂದುದಲ್ಲ | ಈ ನಗರಕೆ |
ಖಳರೆ ನೀವ್ ನಮ್ಮನೆಲ್ಲ ||
ಒಲಿದು ಕರೆಸೆ ಬಂದೆ | ಲಲನೆ ಸೋತಳು ಎನ್ನ |
ಚಲುವಿಕೆ ಕಂಡಿಂದಿಲಿ || 213 ||

ವರಿಸಿದಳೆನೆ ಕೇಳುತ್ತ | ಸುನಾಭನು |
ವರ ವಿದ್ವಜ್ಜನರೆನ್ನುತ ||
ಕರೆಸಿರ್ದಡೀ ಪರಿ | ತರುಣಿಯ ಕೆಡಿಸಿದೆ |
ಶಿರವರಿಯುವೆನು ಧೂರ್ತ || 214 ||

ವಿಧಿಯ ವರದ ಬಲದಿ | ಕೊಬ್ಬಿರುವಂಥ |
ಅಧಮರನೀ ದಿನದಿ ||
ಸದೆಯಲಿಂತೀ ಕಾರ್ಯ | ಒದಗಿಲಿ ಗೈದಿಹೆ |
ನದ ಕಾಣಿಸುವೆ ಶೀಘ್ರದಿ || 215 ||

**ಶಂಕರಾಭರಣ - ಮಟ್ಟೆ**
ಧೀರನಹುದು ನಾಟ್ಯಗಾರನೆಂದು ನಮ್ಮನು |
ಭೂರಿ ವಂಚಿಸುತ್ತ ಬಲವ ಕೂಡಿ ಪುರವನು ||
ಸೇರಿ ಕಪಟದಿಂದ ಗೆಲುವೆನೆಂದು ಬಂದುದು |
ಮಾರಿ ಬಾಯ ಪೊಗುವ ಕುರಿಯ ತೆರದೊಳಾದುದು || 216 ||

ಮಾರಿ ತನೆಗೆ ತಾನೆ ಜಗದಿ ಪರರ ಸಿರಿಯನು |
ಮೀರಿ ಧರ್ಮವನ್ನು ಮನದಿ ಬಯಸುವಾತನು ||
ಪೌರುಷದಲಿ ಸುರರ ಸದೆ ಬಡಿದ ವಿಕ್ರಮ |
ಮಾರನೆನ್ನ ಕೂಡೆ ತೋರ್ಪುದೆಲೆ ಖಳಾಧಮ || 217 ||

ಮದ್ದು ಮಾಯಮಂತ್ರಗಳಲಿ ಮನವ ಕೆಡಿಸುತ |
ಮುದ್ದು ಸುತೆಯರನ್ನು ಕಪಟದಿಂದ ಕೂಡುತ ||
ಕದ್ದು ಪಾಲು ಬೆಣ್ಣೆಗಳನು ಮೆದ್ದ ಕೃಷ್ಣನ |
ಬುದ್ಧಿ ತೋರಿಸುವುದು ಸಹಜ ಕುವರನಾತನ || 218 ||

ಮದ್ದು ಮಾಯಮಂತ್ರವಲ್ಲ ನಿಮ್ಮ ಸುತೆಯರು |
ಶುದ್ಧ ಮನದಿ ಪ್ರೇಮದಿಂದ ವರಿಸಿಕೊಂಡರು ||
ಮರ್ದಿಸುತ್ತ ಖಳರ ಧರ್ಮವನ್ನು ಸಲಹಲು |
ವಿದ್ಯೆ ಇದುವೆ ಸಹಜ ರಣದಿ ನೋಳ್ಪುದೀಗಲು || 219 ||

**ಭಾಮಿನಿ**
ದುರುಳರನು ಸಂಹರಿಸೆ ಮಾರನು |
ಹರಿಯು ಸಂತಸದಿಂದ ಬಳಿಕಾ |
ಪುರವರವನು ವಿಭಾಗಿಸುತ ಮೂವರು ಕುಮಾರರಿಗೆ ||
ಸುರಪ ಮುಖ್ಯರ ನೆರವಿಯಿಂದಲೆ |
ವಿರಚಿಸುತ ಪಟ್ಟಾಭಿಷೇಕವ |
ಒರೆದು ನಯ ನೀತಿಗಳ ದ್ವಾರಕಿಗೈದೆ ಬಲಸಹಿತ || 220 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ

**ಪ್ರಸಂಗ ಪ್ರತಿ ಆಧಾರ:** ಕನ್ನಡ ಸಾಹಿತ್ಯ ಪರಿಷತ್ ಮಹಾರಾಷ್ಟ್ರ ಘಟಕ ಪ್ರಕಟಿತ ಅಗರಿ ಶ್ರೀನಿವಾಸ ಭಾಗವತ ಸಂಸ್ಮರಣ ಪ್ರಸಂಗ ಮಾಲಿಕೆ

**ಪ್ರಸಂಗ ಪ್ರತಿ ಕೊಟ್ಟವರು:** ರವಿ ಮಡೋಡಿ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಅನಿತಾ ಎಂ. ಜಿ. ರಾವ್

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ, ಅಶ್ವಿನಿ ಹೊದಲ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ